PRGI NO : KNKAN/26/A0884

ಈ ನಮ್ಮ

# ಧೃತಿ ನ್ಯೂಸ್

E NAMMA DHURTHI NEWS KANNADA DAILY NEWS PAPER

ಸದೃಢತೆಯ ಹೆಜ್ಜೆಯೊಂದಿಗೆ..., ಕನ್ನಡ ದಿನಪತ್ರಿಕೆ

- ಕೊಪ್ಪಳ
- ವಿಜಯನಗರ
- ರಾಯಚೂರು
- ಬಳ್ಳಾರಿ
- ಗದಗ
- ಬಾಗಲಕೋಟೆ
- ಹಾವೇರಿ
- ಧಾರವಾಡ

ಸಂಪಾದಕರು: ಚಂದ್ರಕಾಂತ | ಸಂಪುಟ: 01 ಸಂಚಿಕೆ: 176 ಪುಟಗಳು: 04 ಬೆಲೆ: 02 ದಿನಾಂಕ: 29-08-2026 ಶನಿವಾರ | email: enammadhruthinews@gmail.com | Pho : 7353595904

## ನೂತನ ಕರ್ನಾಟಕ ವಕೀಲರ ಪರಿಷತ್ ಸದಸ್ಯ ಮಹಾದೇವ ಪ್ರಸಾದ್‌ಗೆ ಸನ್ಮಾನ

ಧೃತಿ ನ್ಯೂಸ್ ಸುದ್ದಿ

ಕುಷ್ಟಗಿ: ನೂತನವಾಗಿ ಕರ್ನಾಟಕ ವಕೀಲರ ಪರಿಷತ್ತಿಗೆ ಆಯ್ಕೆಯಾದ ಕೆ.ಎಸ್. ಮಹಾದೇವ ಪ್ರಸಾದ್ ಅವರನ್ನು ಕುಷ್ಟಗಿ ತಾಲೂಕು ವಕೀಲರ ಸಂಘದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.




ಈ ಸಂದರ್ಭದಲ್ಲಿ ಮಾತನಾಡಿದ ವಕೀಲರು, ಕರ್ನಾಟಕ ವಕೀಲರ ಪರಿಷತ್ತಿಗೆ ಆಯ್ಕೆಯಾಗಿರುವ ಮಹಾದೇವ ಪ್ರಸಾದ್ ಅವ–ರಿಗೆ ಅಭಿನಂದನೆ ಸಲ್ಲಿಸಿ, ಕಾನೂನು ಕ್ಷೇತ್ರದಲ್ಲಿ ಮತ್ತಷ್ಟು ಉತ್ತಮ ಸೇವೆ ಸಲ್ಲಿಸುವ ಮೂಲಕ ವಕೀಲರ ಹಿತಾಸಕ್ತಿಗೆ ಶ್ರಮಿಸಲಿ ಎಂದು ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಎಚ್.ಆರ್. ನಾಯಕ, ಬಸವರಾಜ ಬಂಡೇರ, ಎಸ್.ಜಿ. ಪಾಟೀಲ, ಎನ್.ಆರ್. ಸೂಡಿ, ಸಿ.ಎನ್. ಉಪ್ಪಿನ, ಎಸ್.ವೈ. ಬುಕುನಟ್ಟಿ, ಎಸ್.ಎನ್. ಪಾಟೀಲ, ಎ.ಎಚ್. ಪಲ್ಲೇದ, ಎಂ.ಎಚ್. ಗೋಡಿ, ತಿಪ್ಪಣ್ಣ ಕುಂಬಾರ, ಬಿ.ಕೆ. ದಾಸರ, ಶಶಿ ಶೆಟ್ಟರ್, ಶಫಿ ಹೇರೂರ ಸೇರಿದಂತೆ ವಕೀಲರು ಉಪಸ್ಥಿತರಿದ್ದರು.

ಈ ನಮ್ಮ ಧೃತಿ ನ್ಯೂಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.
ಮೊ: 7353595904

# ಡಿಕೆಶಿ ಸಂಪುಟದ ಮೊದಲ ವಿಕೆಟ್ : ನಾಗೇಂದ್ರ ರಾಜೀನಾಮೆ

ಧೃತಿ ನ್ಯೂಸ್ ಸುದ್ದಿ

ಬೆಂಗಳೂರು: ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಘೋಷಿಸಿದ ನಾಗೇಂದ್ರ, ತಮ್ಮ ಶಾಸಕ ಸ್ಥಾನಕ್ಕೂ ರಾಜೀನಾಮೆ ನೀಡುವುದಾಗಿ ತಿಳಿಸಿದರು. ಸಚಿವರಾಗಿ ಒಂದು ತಿಂಗಳು ಪೂರ್ಣಗೊಳ್ಳುವ ಮೊದಲೇ ಡಿ.ಕೆ. ಶಿವಕುಮಾರ್ ನೇತೃತ್ವದ ಸಂಪುಟದಲ್ಲಿ ಮೊದಲ ವಿಕೆಟ್ ಪತನವಾಗಿದೆ.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ನಾಗೇಂದ್ರ, ಕಣ್ಣೀರಿಡುತ್ತಲೇ ಮುಖ್ಯಮಂತ್ರಿ ಅವರಿಗೆ ರಾಜೀನಾಮೆ ನೀಡುತ್ತಿರುವುದಾಗಿ ಘೋಷಿಸಿದರು. ತಮ್ಮ ವಿರುದ್ಧ ನಡೆಯುತ್ತಿರುವ ಆರೋಪಗಳು ಹಾಗೂ ರಾಜ–ಕೀಯ ಕುತಂತ್ರದ ಕುರಿತು ವರಿಷ್ಠರಲ್ಲಿ ಮನವಿ ಮಾಡುವುದಾಗಿ ಹೇಳಿದರು. "ನನಗೆ ಆಗಿರುವ ಅನ್ಯಾಯದ ಬಗ್ಗೆ ಮುಖ್ಯಮಂತ್ರಿ ಹಾಗೂ ಪಕ್ಷದ ವರಿಷ್ಠರ ಗಮನಕ್ಕೆ ತರುತ್ತೇನೆ. ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ. ನನ್ನ ಶಾಸಕ ಸ್ಥಾನಕ್ಕೂ ರಾಜೀನಾಮೆ ಕೊಡುತ್ತೇನೆ. ಜನತಾ ನ್ಯಾಯಾಲಯಕ್ಕೆ ಹೋಗೋಣ, ಬನ್ನಿ" ಎಂದು ಸವಾಲು ಹಾಕಿದರು. ತಮ್ಮ ವಿರುದ್ಧದ ಆರೋಪಗಳನ್ನು ತಳ್ಳಿಹಾಕಿದ ನಾಗೇಂದ್ರ, ತಂದೆಯ ಸಹಿ ನಕಲು ಮಾಡಿದವರು



ಯಾರು ಎಂಬುದು ತನಿಖೆಯಿಂದ ಗೊತ್ತಾಗಲಿದೆ ಎಂದರು. ಸದನದಲ್ಲಿಯೂ ಈ ಪ್ರಕರಣದ ಬಗ್ಗೆ ಚರ್ಚೆಯಾಗಬೇಕಿತ್ತು. ಆದರೆ ತಮ್ಮ ಪರವಾಗಿ ಮಾತನಾಡಲು ಅವಕಾಶ ನೀಡಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

"ನಿಮಗೆ ತಾಕತ್ತು ಇದ್ದರೆ ಕಾಂಗ್ರೆಸ್ ಎದುರಿಸಿ. ನಿಮ್ಮ ಗೊಡ್ಡು ಬೆದರಿಕೆಗೆ ನಾನು ಬಗ್ಗುವುದಿಲ್ಲ. ಇಡಿ, ಸಿಬಿಐಗೆ ಹೆದರುವ ಪ್ರಶ್ನೆಯೇ ಇಲ್ಲ. ನನ್ನ ವಿರುದ್ಧ ಆರೋಪ ಸಾಬೀತಾಗುವುದಿಲ್ಲ; ಈ ಪ್ರಕರಣದಲ್ಲಿ ಆರೋಪ ಮುಕ್ತನಾಗಿ ಹೊರಬರುತ್ತೇನೆ" ಎಂದು ವಿಶ್ವಾಸ ವ್ಯಕ್ತಪಡಿಸಿದರು. ಬಳ್ಳಾರಿ ಜನರನ್ನು ಹಾಗೂ ತಮ್ಮ ಸಮುದಾಯವನ್ನು ರಾಜಕೀಯವಾಗಿ ಬಳಸಿಕೊಳ್ಳಲಾಗುತ್ತಿದೆ ಎಂದು ಆರೋಪಿಸಿದ ಅವರು, "ನನ್ನನ್ನು ನಮ್ಮ ಸಮುದಾಯದಲ್ಲಿ ವಿಲನ್ ಮಾಡಲು ಹೊರಟಿದ್ದೀರಿ. ಅದು ಸಾಧ್ಯವಿಲ್ಲ. ನಮ್ಮ ಜನ ಎಚ್ಚೆತ್ತುಕೊಂಡಿದ್ದಾರೆ. ಕುತಂತ್ರದಿಂದ ನಮ್ಮನ್ನು ಮುಗಿಸಲು ಸಾಧ್ಯವಿಲ್ಲ" ಎಂದು ಹೇಳಿದರು.

ತಮ್ಮ ವಿರುದ್ಧದ ರಾಜಕೀಯ ಬೆಳವಣಿಗೆಗಳ ಹಿಂದೆ ಮಾಜಿ ಸಚಿವರಾದ ಶ್ರೀರಾಮುಲು ಹಾಗೂ ರೆಡ್ಡಿ ಅವರ ಕುತಂತ್ರವಿದೆ ಎಂಬ ಆರೋಪಗಳ ಬಗ್ಗೆಯೂ ಪ್ರತಿಕ್ರಿಯಿಸಿದ ನಾಗೇಂದ್ರ, "ಅದು ನಿಜವೆಂದಾದರೆ ಬನ್ನಿ, ರಾಜೀನಾಮೆ ಮಾಡುತ್ತೇನೆ. ರಾಮುಲು ಅಣ್ಣ, ನೀನೇ ಬಾ, ಜನತಾ ನ್ಯಾಯಾಲಯಕ್ಕೆ ಹೋಗೋಣ" ಎಂದು ಸವಾಲು ಹಾಕಿದರು. 'ಪಕ್ಕದಲ್ಲಿ ನಿಂತು ಯಾರಿಗೋ ಚೀಟಿ ಕೊಡುವುದು ಬೇಡ. ನಾನು ಅಖಾಡಕ್ಕೆ ಇಳಿಯುತ್ತೇನೆ. ಇಲ್ಲಸಲ್ಲದ ಕಾರಣಗಳಿಂದ ನೀಚ ಕೆಲಸ ಮಾಡಲು ಹೊರಟಿದ್ದೀರಿ. ನಿಮಗೆ ಒಳ್ಳೆಯದಾಗುವುದಿಲ್ಲ. ಜನತಾ ನ್ಯಾಯಾಲಯಕ್ಕಿಂತ ದೊಡ್ಡದು ಯಾವುದೂ ಇಲ್ಲ" ಎಂದು ಎಚ್ಚರಿಕೆ ನೀಡಿದರು.

ರಾಜೀನಾಮೆ ನಿರ್ಧಾರದಿಂದ ಕಾಂಗ್ರೆಸ್ ಪಕ್ಷಕ್ಕೆ ಮುಜುಗರವಾಗಬಾರದು ಎಂಬ ಕಾರಣಕ್ಕೆ ಮುಖ್ಯಮಂತ್ರಿ ಅವರಿಗೆ ರಾಜೀನಾಮೆ ನೀಡುತ್ತಿರುವುದಾಗಿ ತಿಳಿಸಿದ ನಾಗೇಂದ್ರ, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್‌ನ ಹಿರಿಯ ನಾಯಕರಿಗೆ ಧನ್ಯವಾದ ಸಲ್ಲಿಸಿದರು. ಮಲ್ಲಿಕಾರ್ಜುನ ಖರ್ಗೆ, ಕೆ.ಸಿ. ವೇಣುಗೋಪಾಲ್, ರಾಹುಲ್ ಗಾಂಧಿ, ರಣದೀಪ್ ಸಿಂಗ್ ಸುರ್ಜೇವಾಲ, ಸಿದ್ದರಾಮಯ್ಯ, ಬಿ.ಕೆ. ಹರಿಪ್ರಸಾದ್, ಜಮೀರ್ ಅಹಮದ್ ಖಾನ್, ನಾಸೀರ್ ಅಹಮದ್ ಹಾಗೂ ಪ್ರಿಯಾಂಕ್ ಖರ್ಗೆ ಅವರು ಸದನದಲ್ಲಿ ತಮ್ಮ ಪರವಾಗಿ ಮಾತನಾಡಲು ಸಿದ್ಧರಾಗಿದ್ದರು. ಆದರೆ ಅವಕಾಶ ದೊರೆಯಲಿಲ್ಲ ಎಂದು ಹೇಳಿದರು.

ಬಳ್ಳಾರಿಯ ಶಾಸಕರು ಹಾಗೂ ಸಂಸದರು ತಮ್ಮೊಂದಿಗೆ ಇದ್ದಾರೆ ಎಂದು ತಿಳಿಸಿದ ನಾಗೇಂದ್ರ, ಮುಂದಿನ ಬೆಳವಣಿಗೆಗಳ ಕುರಿತು "ಅಖಾಡದಲ್ಲೇ ಮಾತನಾಡುತ್ತೇನೆ" ಎಂದು ಹೇಳಿ, ಮಾಧ್ಯಮಗಳ ಹೆಚ್ಚಿನ ಪ್ರಶ್ನೆಗಳಿಗೆ ಉತ್ತರಿಸದೆ ತೆರಳಿದರು.

## ಯಲಬುರ್ಗಾ : ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ಜನಸಂಪರ್ಕ ಸಂವಾದ

ಧೃತಿ ನ್ಯೂಸ್ ಸುದ್ದಿ

ಕೊಪ್ಪಳ: ಜಿಲ್ಲಾಡಳಿತ, ಜಿಲ್ಲಾ ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೊಪ್ಪಳ ಮತ್ತು ಯಲಬುರ್ಗಾ ಪಟ್ಟಣದ ಡಿ. ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯದ ಸಂಯುಕ್ತಾಶ್ರಯದಲ್ಲಿ "ಮಕ್ಕಳ ಮೇಲಿನ ದೌರ್ಜನ್ಯ ತಡೆಗಾಗಿ ಜನಸಂಪರ್ಕ ಸಂವಾದ ಕಾರ್ಯಕ್ರಮ" ವನ್ನು ಇತ್ತೀಚೆಗೆ ವಸತಿ ನಿಲಯದಲ್ಲಿ ಆಯೋಜಿಸಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ರಕ್ಷಣಾಧಿಕಾರಿ (ಅಸಾಂಸ್ಥಿಕ) ರವಿ ಬಡಿಗೇರ ಮಾತನಾಡಿ, ಪೋಷಣೆ ಮತ್ತು ರಕ್ಷಣೆ ಅಗತ್ಯವಿರುವ ಯಾವುದೇ ಮಗು ಕಂಡುಬಂದಲ್ಲಿ ಮಕ್ಕಳ ಸಹಾಯವಾಣಿ 1098ಕ್ಕೆ ಕರೆ ಮಾಡಿ ಮಾಹಿತಿ ನೀಡಬೇಕು. ಮಾಹಿತಿ ದೊರೆತ ತಕ್ಷಣ ತಂಡವು ಮಗುವಿರುವ ಸ್ಥಳಕ್ಕೆ ತೆರಳಿ ಮಗುವನ್ನು ರಕ್ಷಿಸಿ, ಮುಂದಿನ ಪೋಷಣೆ ಮತ್ತು ರಕ್ಷಣೆಗಾಗಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರುಪಡಿಸಲಿದೆ ಎಂದು ತಿಳಿಸಿದರು.

ಬೇಡವಾದ ಮಗುವನ್ನು ಕಸದ ತೊಟ್ಟಿ, ಮೋರಿ, ದೇವಸ್ಥಾನ ಅಥ–ವಾ ರಸ್ತೆಬದಿಯಲ್ಲಿ ಬಿಸಾಡುವುದು ಕಾನೂನುಬಾಹಿರ, ಅಮಾನವೀಯ ಹಾಗೂ ಅಪಾಯಕಾರಿ ಕೃತ್ಯವಾಗಿದೆ. ಇಂತಹ ಮಕ್ಕಳನ್ನು ಎಲ್ಲೆಂದರಲ್ಲಿ ಬಿಸಾಡದೆ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ಒಪ್ಪಿಸಬೇಕು. ಸಮಿತಿಯು ಕಾನೂನುಬದ್ಧವಾಗಿ ಮಗುವಿನ ಪುನರ್ವಸತಿ ಮತ್ತು ದತ್ತು ಪ್ರಕ್ರಿಯೆಗೆ ಕ್ರಮ ಕೈಗೊಂಡು ಮಗುವಿಗೆ ಸುರಕ್ಷಿತ ಬದುಕು ಕಲ್ಪಿಸುತ್ತದೆ. ಮಗುವನ್ನು ಸಮಿತಿಯ ವಶಕ್ಕೆ ಒಪ್ಪಿಸುವ ಪೋಷಕರ ವಿವರಗಳನ್ನು ಗೌಪ್ಯವಾಗಿಡಲಾಗುವುದು ಎಂದರು.





ಪೋಷಕತ್ವ ಯೋಜನೆಯಡಿ 6ರಿಂದ 18 ವರ್ಷದೊಳಗಿನ ಜೈವಿಕ ಪೋಷಕರಿಲ್ಲದ ಮಕ್ಕಳನ್ನು ಆರೈಕೆ ಮತ್ತು ಪೋಷಣೆ ಮಾಡಲು ಇಚ್ಛಿಸುವ ದಂಪತಿಗಳು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯನ್ನು ಸಂಪರ್ಕಿಸಬಹುದು ಎಂದು ಮಾಹಿತಿ ನೀಡಿದರು.

ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಮಾಜ ಕಾರ್ಯಕರ್ತೆ ಪ್ರತಿಭಾ ಕಾಶಿಮಠ ಮಾತನಾಡಿ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಗಟ್ಟಲು ಸರ್ಕಾರ ಹಲವು ಕಾನೂನುಗಳನ್ನು ಜಾರಿಗೊಳಿಸಿದ್ದು, ಅವುಗಳಲ್ಲಿ ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆ (ಪೋಕ್ಸೊ)–2012, ತಿದ್ದುಪಡಿ–2019 ಪ್ರಮುಖವಾಗಿದೆ. 18 ವರ್ಷದೊಳಗಿನ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ, ಲೈಂಗಿಕ ಕಿರುಕುಳ ಹಾಗೂ ಇಂತಹ ಕೃತ್ಯಗಳಿಗೆ ಸಹಾಯ, ಪ್ರೋತ್ಸಾಹ ಅಥವಾ ಪ್ರಯತ್ನಿಸುವವರಿಗೆ ಕಾನೂನಿನಡಿ ಕಠಿಣ ಶಿಕ್ಷೆ ವಿಧಿಸಲಾಗುತ್ತದೆ ಎಂದು ತಿಳಿಸಿದರು. ಸಾಮಾಜಿಕ ಜಾಲತಾಣಗಳ ಪ್ರಭಾವದಿಂದ ಪ್ರೀತಿ–ಪ್ರೇಮದ ಹೆಸರಿನಲ್ಲಿ ಅಪ್ರಾಪ್ತ ವಯಸ್ಸಿನ ಮಕ್ಕಳು ಕಾನೂನಿನ ವ್ಯಾಪ್ತಿಗೆ ಸಿಲುಕುತ್ತಿರುವುದು ಕಂಡುಬರುತ್ತಿದೆ. ಅದೇ ರೀತಿ ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ವಿವಾಹ ಮಾಡುವುದು, ಆಯೋಜಿಸುವುದು ಅಥವಾ ಪ್ರೋತ್ಸಾಹಿಸುವುದು ಕಾನೂನುಬಾಹಿರವಾಗಿದ್ದು, ಬಾಲ್ಯವಿವಾಹ ನಿಷೇಧ ಕಾಯ್ದೆಯಡಿ ಶಿಕ್ಷೆಗೆ ಒಳಪಡಿಸಲಾಗುತ್ತದೆ ಎಂದರು. ಬಾಲ್ಯವಿವಾಹದಿಂದ ತಾಯಿ ಮರಣ, ಶಿಶು ಮರಣ ಹಾಗೂ ಅಪೌಷ್ಟಿಕತೆ ಸೇ–ರಿದಂತೆ ಹಲವು ಗಂಭೀರ ಸಮಸ್ಯೆಗಳು ಉಂಟಾಗುತ್ತವೆ. ಆದ್ದರಿಂದ ಗ್ರಾಮ ಮಟ್ಟದ ಮಕ್ಕಳ ರಕ್ಷಣಾ ಸಮಿತಿಗಳ ಮೂಲಕ ಮಕ್ಕಳ ಹಕ್ಕುಗಳು, ಕಾನೂನುಗಳು ಮತ್ತು ಮಕ್ಕಳ ಸುರಕ್ಷತೆ ಕುರಿತು ವ್ಯಾಪಕ ಜಾಗೃತಿ ಮೂಡಿಸಿ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಹಾಗೂ ಬಾಲ್ಯವಿವಾಹ ತಡೆಗೆ ಎಲ್ಲರೂ ಸಹಕ–ರಿಸಬೇಕು ಎಂದು ಅವರು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಯಲಬುರ್ಗಾ ವಸತಿ ನಿಲಯದ ಪಾಲಕರಾದ ಫಯಾಜ್ ಪ್ರಾಸ್ತಾವಿಕವಾಗಿ ಮಾತನಾಡಿದರು. ವಸತಿ ನಿಲಯದ ಮೇಲ್ವಿಚಾರಕಿ ಶಂಕರಮ್ಮ ಸೇ–ರಿದಂತೆ ಮತ್ತಿತರರು ಉಪಸ್ಥಿತರಿದ್ದರು. ದೇವರಾಜ್ ತಿಲಗರ ಕಾರ್ಯಕ್ರಮ ನಿರೂಪಿಸಿದರು. ರಮೇಶ್ ವಂದಿಸಿದರು.

## ಬ್ರಹ್ಮಶ್ರೀ ನಾರಾಯಣ ಗುರು ಜಯಂತಿಗೆ ಮಾತ್ರ ಈಡಿಗ ಮುಖಂಡರು ಮುನ್ನೆಲೆಗೆ ಬರಬೇಕೇ

### ಸಮುದಾಯ ಭವನಕ್ಕಾಗಿ ಹೋರಾಟ ಯಾವಾಗ ಗೋವಿಂದರಾಜ್ ಕೊಪ್ಪಳ ಪ್ರಶ್ನೆ

ಧೃತಿ ನ್ಯೂಸ್ ಸುದ್ದಿ

ಕೊಪ್ಪಳ: ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪೂಜೆ, ಆಚರಣೆಗಳಿಗೆ ಮಾತ್ರ ಈಡಿಗ ಸಮಾಜದ ಮುಖಂಡರು ಮುನ್ನೆಲೆಗೆ ಬರುವುದಲ್ಲದೆ, ಸಮಾಜದ ಸಂಕಷ್ಟಗಳು ಹಾಗೂ ಮೂಲಭೂತ ಬೇಡಿಕೆಗಳಿಗಾಗಿ ನಿರಂತರ ಹೋರಾಟ ನಡೆಸುವ ಮನೋಭಾವನೆ ಕಾಣಿಸುತ್ತಿಲ್ಲ ಎಂದು ಪತ್ರಕರ್ತ ಹಾಗೂ ಸಾಮಾಜಿ–ಕ ಚಿಂತಕ ಗೋವಿಂದರಾಜ್ ಕೊಪ್ಪಳ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕೊಪ್ಪಳ ನಗರದಲ್ಲಿ ಈಡಿಗ ಸಮಾಜಕ್ಕೆ ಸಮುದಾಯ ಭವನ ನಿರ್ಮಾಣಕ್ಕೆಂದು ಮೀಸಲಾಗಿದ್ದ ಖಾಲಿ ನಿವೇಶನದ ವಿಚಾರವನ್ನು ಪ್ರಸ್ತಾಪಿಸಿರುವ ಅವರು, "ಆ ನಿವೇಶನ ಯಾ–ರಿಂದ ಮಾರಾಟವಾಯಿತು? ಯಾರು ಹಂಚಿಕೊಂಡರು? ಎಂಬುದರ ಬಗ್ಗೆ ಸಮಾಜದ ಮುಂದೆ ಸ್ಪಷ್ಟತೆ ಬರಬೇಕು" ಎಂದು ಪ್ರಶ್ನಿಸಿದ್ದಾರೆ. ಸಮುದಾಯ ಭವನ ನಿರ್ಮಾಣಕ್ಕಾಗಿ ಒಂದು ದಿನವಾದರೂ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೀರಾ ಈಡಿಗ ಸಮಾಜ–ಕ್ಕೆ ಮೀಸಲಾಗಿದ್ದ ನಿವೇಶನವನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲವೇ ಎಂದು ಮುಖಂಡರನ್ನು ಪ್ರಶ್ನಿಸಿರುವ ಅವರು, ಈಗಾಗಲೇ ನಿವೇಶನ ಮಾರಾಟವಾಗಿದ್ದರೆ, ಅದಕ್ಕೆ ಸಂಬಂಧಿಸಿದವರು ಕನಿಷ್ಠ ಒಂದು ನಿವೇಶನವನ್ನಾದರೂ ಸಮಾಜಕ್ಕೆ ಕೊಡಿಸಿ ಈಡಿಗರ ಋಣ ತೀರಿಸಬೇಕು ಎಂದು ಒತ್ತಾಯಿಸಿದ್ದಾರೆ. ಕೊಪ್ಪಳದ ರಾಜಕೀಯ ವಲಯದಲ್ಲಿ ಶಾಸಕರಿಗೆ ಆಪ್ತರಾಗಿರುವ ಈಡಿಗ ಸಮಾಜದ ಪ್ರಮುಖರು ಇದ್ದಾರೆ. ಅವರು ಮನಸ್ಸು ಮಾಡಿದರೆ ಸಿಎ ಸೈಟ್ ಮೂಲಕ ಸಮಾಜದ ಸಮುದಾಯ ಭವನಕ್ಕಾಗಿ ನಿವೇಶನ ಪಡೆಯಲು ಪ್ರಯತ್ನಿಸಬಹುದಾಗಿದೆ. ಆದರೆ ಈವರೆಗೆ ಈ ನಿಟ್ಟಿನಲ್ಲಿ ಯಾಕೆ ಪರಿಣಾಮಕಾರಿ ಕ್ರಮ ಕೈಗೊಳ್ಳಲಾಗಿಲ್ಲ ಎಂಬುದೇ ದುರಂತ ಎಂದು ಗೋವಿಂದರಾಜ್ ಕೊಪ್ಪಳ ಹೇಳಿದ್ದಾರೆ.




"ಜಯಂತಿ ದಿನ ಪೂಜೆ ಮಾಡುವುದಷ್ಟೇ ಸಮಾಜ ಸೇವೆಯಲ್ಲ. ಸಮಾಜಕ್ಕೆ ಅಗತ್ಯವಿರುವ ಜಾಗ, ಸಮುದಾಯ ಭವನ ಹಾಗೂ ಹಕ್ಕುಗಳಿಗಾಗಿ ಹೋರಾಟ ಮಾಡುವ ಮನೋಭಾವನೆ ಕೂಡ ಇರಬೇಕು. ಈಡಿಗ ಸಮಾಜದ ಭವಿಷ್ಯಕ್ಕಾಗಿ ಮುಖಂಡರು ಒಗ್ಗಟ್ಟಾಗಿ ಕೆಲಸ ಮಾಡಬೇಕು" ಎಂದು ಅವರು ಆಗ್ರಹಿಸಿದ್ದಾರೆ.

## ಸೆ.6 ರಂದು ಬೆಂಗಳೂರಿನಲ್ಲಿ ವಿದೇಶದಲ್ಲಿ ಅಧ್ಯಯನ ಕಾರ್ಯಕ್ರಮ : ನೋಂದಣಿಗೆ ಸೂಚನೆ

ಧೃತಿ ನ್ಯೂಸ್ ಸುದ್ದಿ

ಕೊಪ್ಪಳ: ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ ವತಿಯಿಂದ ಕೆವಿಟಿಎಸ್‌ಡಿಸಿ ನಿಗಮವು ಅಂತರಾಷ್ಟ್ರೀಯ ನೇಮಕಾತಿ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ರಾಜ್ಯದ ವಿದ್ಯಾರ್ಥಿಗಳಿಗೆ ಜಾಗತಿಕ ಉನ್ನತ ಶಿಕ್ಷಣದ ಅವಕಾಶಗಳನ್ನು ಪರಿಚಯಿಸುವ ಉದ್ದೇಶದಿಂದ ಸೆಪ್ಟೆಂಬರ್ 6 ರಂದು "ವಿದೇಶದಲ್ಲಿ ಅಧ್ಯಯನ ಕಾರ್ಯಕ್ರಮವನ್ನು ಬೆಂಗಳೂರಿನ ಗಾಯತ್ರಿ ವಿಹಾರ, ಗೇಟ್ ನಂ.4. ಅರಮನೆ ಮೈದಾನದಲ್ಲಿ ಆಯೋಜಿಸಲಾಗಿದ್ದು, ಆಸಕ್ತರು ನೋಂದಣಿ ಮಾಡಿಕೊಳ್ಳಬಹುದು.

ಕಾರ್ಯಕ್ರಮದಲ್ಲಿ 10 ಕ್ಕೂ ಹೆಚ್ಚು ದೇಶಗಳ 75 ಕ್ಕೂ ಹೆಚ್ಚು ವಿಶ್ವವಿದ್ಯಾನಿಲಯಗಳು ಭಾಗವಹಿಸುತ್ತಿದ್ದು, ಉನ್ನತ ಶಿಕ್ಷಣಕ್ಕಾಗಿ ವಿದೇಶಿಗಳಿಗೆ ತೆರಳುವ ವಿದ್ಯಾರ್ಥಿಗಳಿಗೆ ವಿದೇಶಿ ಅಧ್ಯಯನದ ಅವಕಾಶಗಳು, ಪ್ರವೇಶ ಪ್ರಕ್ರಿಯೆಗಳು, ವಿದ್ಯಾರ್ಥಿ ವೀಸಾ ಮಾಹಿತಿ ಮತ್ತು ವಿದ್ಯಾರ್ಥಿವೇತನ ಬಗ್ಗೆ ಮಾಹಿತಿಯನ್ನು ಒಂದೇ ವೇದಿಕೆಯಡಿ ಈ ಕಾರ್ಯಕ್ರಮದಲ್ಲಿ ಒದಗಿಸಲು ಉದ್ದೇಶಿಸಲಾಗಿದೆ.

ಜಿಲ್ಲೆಯ ಆಸಕ್ತ ವಿದ್ಯಾರ್ಥಿಗಳು ವೆಬ್‌ಸೈಟ್ https://studyabroad.ksdckarnataka.com ನಲ್ಲಿ ಸೆಪ್ಟೆಂಬರ್ 6 ರೊಳಗಾಗಿ ನೋಂದಾಯಿಸಿಕೊಂಡು ಈ ಕಾರ್ಯಕ್ರಮದಲ್ಲಿ ಭಾಗವಹಿಸಬಹುದು ಎಂದು ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕೊಪ್ಪಳ ಸಿಟಿ ಹೊರವಲಯದಲ್ಲಿ ಚತುಷ್ಪಥ ರಸ್ತೆ ನಿರ್ಮಾಣ ಕಾಮಗಾರಿ ಸ್ಥಳ ಖುದ್ದು ಪರಿಶೀಲಿಸಿದ ಜಿಲ್ಲಾಧಿಕಾರಿಗಳು

ಧೃತಿ ನ್ಯೂಸ್ ಸುದ್ದಿ

ಕೊಪ್ಪಳ: ಕೊಪ್ಪಳ ಜಿಲ್ಲಾಧಿಕಾರಿಗಳಾದ ಡಾ. ಸುರೇಶ್ ಬಿ. ಬಿಟ್ನಾಳ ಅವರು ಆಗಸ್ಟ್ 28 ರಂದು ಕೊಪ್ಪಳ ನಗರದ ಹೊರವಲಯದಲ್ಲಿ ಸಂಚರಿಸಿ, ಚತುಷ್ಪಥ ರಸ್ತೆ ನಿರ್ಮಾಣ ಕಾಮಗಾರಿಗಳ ಬಗ್ಗೆ ಸ್ಥಳ ಪರಿಶೀಲಿಸಿದರು.

ಕೊಪ್ಪಳ ನಗರದ ಗದಗ ರಸ್ತೆಯ ಮಳೆಮಲ್ಲೇಶ್ವರ ದೇವಸ್ಥಾನದಿಂದ ಹಿರೆಹಳ್ಳ, ದದೇಗಲ್, ಡಿ–ಮಾರ್ಟ್ ಮಾರ್ಗವಾಗಿ ಬೈಪಾಸ್ ರಸ್ತೆಯವರೆಗೆ ಚತುಷ್ಪಥ ರಸ್ತೆ ನಿರ್ಮಾಣ ಮತ್ತು ಮಳೆಮಲ್ಲೇಶ್ವರ ದೇವಸ್ಥಾನದಿಂದ ದದೇಗಲ್ ಮಧ್ಯದಲ್ಲಿ ಬರುವ ಹಿರೆಹಳ್ಳಕ್ಕೆ ಸೇತುವೆ ನಿರ್ಮಾಣ ಕಾಮಗಾರಿಗಳ ಬಗ್ಗೆ ಜಿಲ್ಲಾಧಿಕಾರಿಗಳು ಖುದ್ದು ಭೇಟಿ ನೀಡಿ ಸ್ಥಳ ಪರೀಶಿಲನೆ ಮಾಡಿದರು. ಬಳಿಕ ಜಿಲ್ಲಾಡಳಿತ ಭವನದ ಎದುರುಗಡೆಯ ಅಭಯ್ ಸಾಲ್ವೆಂಟ್ ದಿಂದ ಹೊಸಪೇಟೆ ರಸ್ತೆಯ ಬೈಪಾಸ್ ವರೆಗಿನ ಚತುಷ್ಪಥ ರಸ್ತೆ ನಿರ್ಮಾಣ ಕಾಮಗಾರಿಗಳ ಬಗ್ಗೆ ಸ್ಥಳ ಪರಿಶೀಲಿಸಿದರು. ಈ ಕಾಮಗಾರಿಗಳ ಮುಂದಿನ ಕ್ರಮದ ಬಗ್ಗೆ ತ್ವರಿತವಾಗಿ ಕ್ರಮ ವಹಿಸಲು ಸ್ಥಳದಲ್ಲಿದ್ದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ



(ಎನ್.ಹೆಚ್.ಎ.ಐ) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ಗಿರೀಶ್ ಹಾಗೂ ಇತರೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಚತುಷ್ಪಥ ರಸ್ತೆ ನಿರ್ಮಾಣ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅಗತ್ಯವಿರುವ ಜಮೀನನ್ನು ಪಹಣಿಯಲ್ಲಿ ಶೀಘ್ರವಾಗಿ ಇಂದೀಕರಣ ಮಾಡಿ, ಈ ಬಗ್ಗೆ ಅಗತ್ಯ ಮಾಹಿತಿ ಸಲ್ಲಿಸುವಂತೆ ಸ್ಥಳದಲ್ಲಿದ್ದ ಎಡಿಎಲ್‌ಆರ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಈ ಸಂದರ್ಭದಲ್ಲಿ ಎನ್.ಹೆಚ್.ಎ.ಐ., ಎಡಿಎಲ್‌ಆರ್ ಹಾಗೂ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

## ದೋಟಿಹಾಳ ಪ್ರೌಢಶಾಲೆಗೆ ; ವರ್ಷಗಳಿಂದ ಸುಣ್ಣ–ಬಣ್ಣ ಕಾಣದ ಶಾಲೆ

ಧೃತಿ ನ್ಯೂಸ್ ಸುದ್ದಿ

ವರದಿ: ಅಮರೇಶ ತಾರಿವಾಳ

ದೋಟಿಹಾಳ: ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಹಾಗೂ ನಿರ್ವಹಣೆಯ ನಿರ್ಲಕ್ಷ್ಯದಿಂದ ವಿದ್ಯಾರ್ಥಿಗಳು ತೊಂದರೆ ಅನುಭವಿಸುವಂತಾಗಿದೆ. ಶಾಲೆಯಲ್ಲಿ ಅಗತ್ಯ ಪ್ರಮಾಣದ ಶೌಚಾಲಯಗಳ ಕೊರತೆ ಇದ್ದು, ಮತ್ತೊಂದೆಡೆ ಹಲವು ವರ್ಷಗಳಿಂದ ಶಾಲಾ ಕಟ್ಟಡಕ್ಕೆ ಸುಣ್ಣ–ಬಣ್ಣ ಮಾಡದಿರುವುದರಿಂದ ಕಟ್ಟಡದ ಅಂದ ಕಳೆಗುಂದಿದೆ.

ಶಾಲೆಯಲ್ಲಿ ಪ್ರತಿದಿನ ನೂರಾರು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದು, ಅವರಿಗೆ ಸಮರ್ಪಕ ಶೌಚಾಲಯ ಸೌಲಭ್ಯ ಕಲ್ಪಿಸುವುದು ಅತ್ಯಗತ್ಯವಾಗಿದೆ. ಶೌಚಾಲಯಗಳ ಕೊರತೆಯಿಂದ ವಿದ್ಯಾರ್ಥಿಗಳು, ವಿಶೇಷವಾಗಿ ವಿದ್ಯಾರ್ಥಿನಿಯರು, ತೊಂದರೆ ಎದು–ರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಶಾಲಾ ಆವರಣದಲ್ಲಿ ಸ್ವಚ್ಛತೆ ಹಾಗೂ ಆರೋಗ್ಯಕರ ವಾತಾವರಣ ಕಾಪಾಡಲು ಅಗತ್ಯ ಕ್ರಮ




ಕೈಗೊಳ್ಳಬೇಕೆಂಬುದು ಪೋಷಕರು ಮತ್ತು ಸಾರ್ವಜನಿಕರ ಒತ್ತಾಯವಾಗಿದೆ. ಇದರ ಜೊತೆಗೆ ಶಾಲಾ ಕಟ್ಟಡಕ್ಕೆ ಹಲವು ವರ್ಷಗಳಿಂದ ಸುಣ್ಣ–ಬಣ್ಣ ಮಾಡದಿರುವುದ–ರಿಂದ ಗೋಡೆಗಳು ಮಸುಕಾಗಿದ್ದು, ಕಟ್ಟಡದ ಹೊರಭಾಗ ಹಳೆಯದಾಗಿ ಕಾಣುತ್ತಿದೆ. ಶಾಲೆ ಎಂದರೆ ಮಕ್ಕಳಿಗೆ ಉತ್ತಮ ವಾತಾವರಣದಲ್ಲಿ ಶಿಕ್ಷಣ ದೊರೆಯುವ ಸ್ಥಳವಾಗಬೇಕು. ವಿದ್ಯಾರ್ಥಿಗಳಲ್ಲೂ ಬೇಸರ ಮೂಡಿಸುವಂತಾಗಿದೆ.

ಅಧಿಕಾರಿಗಳು ಇತ್ತ ಗಮನಹರಿಸಿ ಶಾಲೆಗೆ ಅಗತ್ಯ ಶೌಚಾಲಯಗಳನ್ನು ನಿರ್ಮಿಸುವುದರ ಜೊತೆಗೆ, ಶಾಲಾ ಕಟ್ಟಡಕ್ಕೆ ಶೀಘ್ರವಾಗಿ ಸುಣ್ಣ–ಬಣ್ಣ ಮಾಡಿಸಿ ಮೂಲಸೌಕರ್ಯಗಳನ್ನು ಸುಧಾ–ರಿಸಬೇಕು.ವಿದ್ಯಾರ್ಥಿಗಳ ಆರೋಗ್ಯ, ಸುರಕ್ಷತೆ ಹಾಗೂ ಉತ್ತಮ ಕಲಿಕಾ ವಾತಾವರಣಕ್ಕೆ ಆದ್ಯತೆ ನೀಡಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

**ಶಾಲೆಯಲ್ಲಿ ನೂರಾರು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದು ನಮ್ಮ ಶಾಲೆಯಲ್ಲಿ ಶೌಚಾಲಯದ ಕೊರತೆ ಹಾಗೂ ಶಾಲೆಯ ಕಾಂಪೌಂಡ್ ವ್ಯವಸ್ಥೆ ಮತ್ತು ಶಾಲೆಗೆ ಬಣ್ಣಗಳ ನೀಡಿ ಬಹಳ ದಿನಗಳು ಗತಿಸಿದೆಸ್ಥಳೀಯ ಗ್ರಾಮ ಪಂಚಾಯತ ಅಧಿಕಾರಿಗಳಿಗೆ ಹಲವಾರು ಬಾರಿ ಮನವಿ ಸಲ್ಲಿಸಿದ್ದೇನೆ ಯಾವುದೇ ಪ್ರಯೋಜನವಾಗಿಲ್ಲ ಆದಷ್ಟು ಬೇಗನೆ ನಮ್ಮ್ ಶಾಲೆಗೆ ಮೂಲಬೂತ ಸೌಲಭ್ಯ ಗಳನ್ನು ಒದಗಿಸಿಬೇಕು**

**ಡಿ ಸುರೇಶ..**
**ಮುಖ್ಯ ಗುರುಗಳು**
**ಸರಕಾರಿ ಪ್ರೌಢ ಶಾಲೆ ದೋಟಿಹಾಳ**

ಈ ನಮ್ಮ ಧೃತಿ ನ್ಯೂಸ್
E NAMMA DHURTHI NEWS
KANNADA DAILY NEWS PAPER

## ಭಿಕ್ಷುಕಿ ಸಾವಿತ್ರಮ್ಮನ ಮನೆಯಲ್ಲಿ ಮೂಟೆಗಟ್ಟಲೆ ಹಣ ಪತ್ತೆ ; ಸ್ಥಳದಲ್ಲೇ ಎಣಿಕೆ



ಮಂಡ್ಯ: ಶ್ರೀರಂಗಪಟ್ಟಣದ ದಿವಾನ್ ಪೂರ್ಣಯ್ಯ ಬೀದಿಯಲ್ಲಿರುವ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಹಿಂಭಾಗದಲ್ಲಿ ವಾಸಿಸುತ್ತಿದ್ದ ಭಿಕ್ಷುಕಿ ಸಾವಿತ್ರಿ ಅವರ ಮನೆಯಲ್ಲಿ ಮೂಟೆಗಟ್ಟಲೆ ಚಿಲ್ಲರೆ ನಾಣ್ಯಗಳು ಹಾಗೂ ನೋಟುಗಳು ಪತ್ತೆಯಾಗಿದ್ದು, ಸ್ಥಳದಲ್ಲೇ ಹಣ ಎಣಿಕೆ ಕಾರ್ಯ ನಡೆಯುತ್ತಿದೆ.

ಸುಮಾರು 40 ವರ್ಷಗಳ ಹಿಂದೆ ಸಾವಿತ್ರಿ ಅವರ ತಾಯಿ ಪಾರ್ವತಮ್ಮ ಅವರು ಶ್ರೀಮಂತ ಕುಟುಂಬದ ವ್ಯಕ್ತಿಯನ್ನು ವಿವಾಹವಾಗಿ ಶ್ರೀರಂಗಪಟ್ಟಣಕ್ಕೆ ಬಂದಿದ್ದರು ಎನ್ನಲಾಗಿದೆ. ಕಾರಣಾಂತರಗಳಿಂದ ಕುಟುಂಬದಿಂದ ದೂರವಾದ ತಾಯಿ–ಮಗಳು ಕಳೆದ 15 ವರ್ಷಗಳಿಂದ ಇದೇ ಪ್ರದೇಶದಲ್ಲಿ ಭಿಕ್ಷೆ ಬೇಡಿ ಜೀವನ ನಡೆಸುತ್ತಿದ್ದರು. ಕೆಲ ತಿಂಗಳ ಹಿಂದೆ ಪಾರ್ವತಮ್ಮ ಮೃತಪಟ್ಟಿದ್ದು, ಸಾವಿತ್ರಿ ಅನಾರೋಗ್ಯದಿಂದ ಬಳಲುತ್ತಿದ್ದರು. ಸಾವಿತ್ರಿ ಅವರು ಹಲವು ದಿನಗಳಿಂದ ಮನೆಯಿಂದ ಹೊರಬಾರದಿರುವುದನ್ನು ಗಮನಿಸಿದ ಸ್ಥಳೀಯರು ಹಾಗೂ ವಿವಿಧ ಸಂಘ–ಸಂಸ್ಥೆಗಳ ಸದಸ್ಯರು ಮನೆಗೆ ತೆರಳಿ ಸ್ವಚ್ಛತಾ ಕಾರ್ಯ ಆರಂಭಿಸಿದರು. ಹಳೆಯ ಬಟ್ಟೆ, ಸಾಮಾನುಗಳು ಹಾಗೂ ಕಸದ ನಡುವೆ ಸ್ಟೀಲ್ ಡಬ್ಬಗಳಲ್ಲಿ ಸಂಗ್ರಹಿಸಿಟ್ಟಿದ್ದ ನೋಟುಗಳು ಹಾಗೂ ಮೂಟೆಗಳಲ್ಲಿ ತುಂಬಿದ್ದ ಚಿಲ್ಲರೆ ನಾಣ್ಯಗಳು ಪತ್ತೆಯಾಗಿವೆ. ಈ ಕುರಿತು ಜ್ಯೋತಿಷಿ ಭಾನುಪ್ರಕಾಶ್ ಶರ್ಮಾ ಮಾತನಾಡಿ, ಇತ್ತೀಚೆಗಷ್ಟೇ ಮಂಡ್ಯದಲ್ಲಿಯೂ ಭಿಕ್ಷುಕಿಯೊಬ್ಬರ ಮನೆಯಲ್ಲಿ ಹಣ ಪತ್ತೆಯಾಗಿತ್ತು. ಸಾವಿತ್ರಿ ಅವರ ಮನೆಯಲ್ಲಿ ಪತ್ತೆಯಾಗಿರುವ ಹಣವನ್ನು ಅವರ ಹೆಸರಿನಲ್ಲೇ ಠೇವಣಿ ಇಡುವ ಕುರಿತು ಸ್ಥಳೀಯರು ನಿರ್ಧರಿಸಿದ್ದಾರೆ ಎಂದು ತಿಳಿಸಿದ್ದಾರೆ. ಇದೇ ವೇಳೆ ಸ್ಥಳೀಯರು ಸಾವಿತ್ರಿ ಅವರನ್ನು ಸ್ವಚ್ಛಗೊಳಿಸಿ, ವೈದ್ಯಕೀಯ ತಪಾಸಣೆ ನಡೆಸಿಸುವುದರ ಜೊತೆಗೆ ಅವರ ಮನೆಯನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸುವ ಕಾರ್ಯವನ್ನೂ ಕೈಗೊಂಡಿದ್ದಾರೆ.

## ಆಪರೇಷನ್ ಸಿಂಧೂರ್ ವೇಳೆ ಭಾರತದ ಎಸ್–400 ನಿಯೋಜನೆ ಸ್ಥಳ ತಿಳಿಯದೆ ಪರದಾಡಿದ್ದ ಪಾಕ್



ನವದೆಹಲಿ: ಭಾರತದಲ್ಲಿ ಎಸ್–400 ವಾಯು ರಕ್ಷಣಾ ವ್ಯವಸ್ಥೆಗಳನ್ನು ಎಲ್ಲಿ ನಿಯೋಜಿಸಲಾಗಿದೆ ಎಂಬ ಮಾಹಿತಿ ತಿಳಿದುಕೊಳ್ಳಲು ಪಾಕಿಸ್ತಾನ ಹರಸಾಹಸ ನಡೆಸಿತ್ತು ಎಂದು ಏರ್ ಮಾರ್ಷಲ್ ಜೀತೇಂದ್ರ ಮಿಶ್ರಾ ಹೇಳಿದ್ದಾರೆ.

ಪಹಲ್ಗಾಮ್ ಉಗ್ರರ ದಾಳಿಗೆ ಪ್ರತಿಯಾಗಿ ಭಾರತ ಕೈಗೊಂಡಿದ್ದ 'ಆಪರೇಷನ್ ಸಿಂಧೂರ್' ಕಾರ್ಯಾಚರಣೆ ವೇಳೆ ರಷ್ಯಾ ನಿರ್ಮಿತ ಎಸ್–400 ವಾಯು ರಕ್ಷಣಾ ವ್ಯವಸ್ಥೆಯ ಪರಿಣಾಮಕಾರಿತ್ವದಿಂದಾಗಿ ಪಾಕಿಸ್ತಾನದ ಯುದ್ಧವಿಮಾನಗಳು ಭಾರತೀಯ ಗಡಿಯ 200 ಕಿ.ಮೀ. ವ್ಯಾಪ್ತಿಯೊಳಗೆ ಪ್ರವೇಶಿಸಲು ಸಾಧ್ಯವಾಗಲಿಲ್ಲ ಎಂದು ಅವರು ಸುದ್ದಿ ಸಂಸ್ಥೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ. ಭಾರತದಲ್ಲಿ ಎಸ್–400 ವ್ಯವಸ್ಥೆಗಳನ್ನು ಎಲ್ಲಿ ನಿಯೋಜಿಸಲಾಗಿದೆ ಎಂಬುದನ್ನು ಪತ್ತೆಹಚ್ಚಲು ಪಾಕಿಸ್ತಾನ ತನ್ನಲ್ಲಿದ್ದ ಎಲ್ಲ ತಂತ್ರಗಳನ್ನು ಬಳಸಿತ್ತು. ಇದಕ್ಕಾಗಿ ಭಾರತದಲ್ಲಿದ್ದ ತನ್ನ ಗೂಢಚಾರರು ಹಾಗೂ ಸ್ಲೀಪರ್ ಸೆಲ್‌ಗಳನ್ನು ಸಕ್ರಿಯಗೊಳಿಸಿತ್ತು ಎಂದು ಜೀತೇಂದ್ರ ಮಿಶ್ರಾ ಹೇಳಿದ್ದಾರೆ. ಎಸ್–400 ನಿಯೋಜನೆ ಸ್ಥಳಗಳನ್ನು ಪತ್ತೆಹಚ್ಚಲು ಪಾಕಿಸ್ತಾನ ಹಲವು ಮಾರ್ಗಗಳನ್ನು ಅನುಸರಿಸಿತ್ತು. ಇತರ ದೇಶಗಳಿಂದಲೂ ಉಪಗ್ರಹ ಆಧಾರಿತ ಗುಪ್ತಚರ ಮಾಹಿತಿಯನ್ನು ಪಡೆಯುತ್ತಿತ್ತು. ಪಾಕಿಸ್ತಾನದ ಯುದ್ಧವಿಮಾನಗಳು ಭಾರತೀಯ ಗಡಿಯತ್ತ ಬಂದಾಗಲೆಲ್ಲ ಎಸ್–400 ಅವುಗಳನ್ನು ತಡೆಯುವಲ್ಲಿ ಯಶಸ್ವಿಯಾಗಿತ್ತು. ಹೀಗಾಗಿ, ಪಾಕಿಸ್ತಾನ ತನ್ನ ಸ್ಲೀಪರ್ ಸೆಲ್‌ಗಳನ್ನು ಸಕ್ರಿಯಗೊಳಿಸಿತ್ತು ಎಂದು ಅವರು ತಿಳಿಸಿದ್ದಾರೆ. ಚೀನಾ ಪಾಕಿಸ್ತಾನಕ್ಕೆ ಭಾರತದ ಪ್ರಮುಖ ಸೇನಾ ನೆಲೆಗಳ ಕುರಿತು ಮಾಹಿತಿ ನೀಡುತ್ತಿತ್ತು ಎಂಬ ವರದಿಗಳೂ ಇವೆ ಎಂದು ಅವರು ಹೇಳಿದ್ದಾರೆ.ಪಾಕಿಸ್ತಾನದ ರೇಡಾರ್ ವಿಮಾನವನ್ನು ಹೊಡೆದುರುಳಿಸಿದ ಘಟನೆಯನ್ನು ನೆನಪಿಸಿಕೊಂಡ ಜೀತೇಂದ್ರ ಮಿಶ್ರಾ, ಎಸ್–400 ಆಪರೇಟರ್ ದಾಳಿ ನಡೆಸಬೇಕೇ ಎಂದು ನನ್ನನ್ನು ಕೇಳಿದರು. ನಾನು ದಾಳಿ ನಡೆಸುವಂತೆ ಆದೇಶಿಸಿದೆ. ಸುಮಾರು 314 ಕಿ.ಮೀ. ದೂರದಲ್ಲಿದ್ದ ಪಾಕಿಸ್ತಾನದ ವಿಮಾನವನ್ನು ಹೊಡೆದುರುಳಿಸಲಾಯಿತು ಎಂದು ತಿಳಿಸಿದ್ದಾರೆ. ನೆಲದಿಂದ ಆಗಸಕ್ಕೆ ಉಡಾಯಿಸುವ ಕ್ಷಿಪಣಿಯ ಮೂಲಕ ನಡೆದ ವಿಶ್ವದ ಅತ್ಯಂತ ದೂರದ ಯಶಸ್ವಿ ದಾಳಿಗಳಲ್ಲಿ ಇದೂ ಒಂದಾಗಿದೆ ಎಂದು ಅವರು ಬಣ್ಣಿಸಿದ್ದಾರೆ.

## ಗ್ರ್ಯಾಂಡ್ ಚೆಸ್ ಟೂರ್ ಪ್ರಶಸ್ತಿ ಗೆದ್ದ ಮೊದಲ ಭಾರತೀಯ ಪ್ರಜ್ಞಾನಂದ

ಸೇಂಟ್ ಲೂಯಿಸ್: ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅವರು ಅಮೆರಿಕದ ಸೇಂಟ್ ಲೂಯಿಸ್‌ನಲ್ಲಿ ನಡೆದ ಗ್ರ್ಯಾಂಡ್ ಚೆಸ್ ಟೂರ್ (ಜಿಸಿಟಿ) ಪ್ರಶಸ್ತಿ ಗೆದ್ದ ಮೊದಲ ಭಾರತೀಯ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಇಲ್ಲಿನ ಗ್ರ್ಯಾಂಡ್ ಫಿನಾಲೆಯಲ್ಲಿ ಅಮೆರಿಕದ ಗ್ರ್ಯಾಂಡ್‌ಮಾಸ್ಟರ್ ಫ್ಯಾಬಿಯಾನೊ ಕರುವಾನಾ ಅವರನ್ನು ಮಣಿಸುವ ಮೂಲಕ ಪ್ರಜ್ಞಾನಂದ ಅವರು ಈ ಐತಿಹಾಸಿಕ ಸಾಧನೆ ಮಾಡಿದ್ದಾರೆ.



ಆರಂಭದಲ್ಲಿ ಕರುವಾನಾ ವಿರುದ್ಧ ಹಿನ್ನಡೆ ಅನುಭವಿಸಿದ ಪ್ರಜ್ಞಾನಂದ, ಬಳಿಕ ಅದ್ಭುತ ಪ್ರದರ್ಶನ ನೀಡಿ ಪಂದ್ಯದಲ್ಲಿ ಭರ್ಜರಿ ತಿರುಗೇಟು ನೀಡಿದರು. ಅಂತಿಮವಾಗಿ ಕರುವಾನಾ ಅವರನ್ನು 15–13 ಅಂಕಗಳಿಂದ ಮಣಿಸಿ ಚೊಚ್ಚಲ ಗ್ರ್ಯಾಂಡ್ ಚೆಸ್ ಟೂರ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು. ಈ ಗೆಲುವಿನೊಂದಿಗೆ ಪ್ರಜ್ಞಾನಂದ ಅವರು 2 ಲಕ್ಷ ಅಮೆರಿಕನ್ ಡಾಲರ್ ಬಹುಮಾನವನ್ನೂ ತಮ್ಮದಾಗಿಸಿಕೊಂಡಿದ್ದಾರೆ. ಅವರ ಈ ಸಾಧನೆ ಭಾರತೀಯ ಕ್ರೀಡಾಭಿಮಾನಿಗಳಲ್ಲಿ ಸಂಭ್ರಮ ಮೂಡಿಸಿದೆ.

# ಭಾಗವತ್ ಅವರದು ಚಿನ್ನದಂತಹ ಹೃದಯ : ಆಶಾ ಜಡೇಜಾ ಮೋಟ್ವಾನಿ

ನ್ಯೂಯಾರ್ಕ್: ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಅವರು ಚಿನ್ನದಂತಹ ಹೃದಯ ಹೊಂದಿದ್ದು, ಏಕೀಕೃತ ಭಾರತ ಹಾಗೂ ಏಕೀಕೃತ ಜಗತ್ತಿನಲ್ಲಿ ನಂಬಿಕೆ ಇಟ್ಟಿದ್ದಾರೆ. ವಿವಿಧ ಧಾರ್ಮಿಕ ಸಮುದಾಯಗಳ ನಡುವೆ ಅವರು ಯಾವುದೇ ಭೇದಭಾವ ಕಾಣುವುದಿಲ್ಲ ಎಂದು ಅಮೆರಿಕದ ಸಿಲಿಕಾನ್ ವ್ಯಾಲಿಯಲ್ಲಿ ನೆಲೆಸಿರುವ ಸಾಹಸೋದ್ಯಮ ಉದ್ಯಮಿ ಆಶಾ ಜಡೇಜಾ ಮೋಟ್ವಾನಿ ಹೇಳಿದ್ದಾರೆ.

ಆರ್‌ಎಸ್‌ಎಸ್‌ನ ಶತಮಾನೋತ್ಸವದ ಅಂಗವಾಗಿ ಆಯೋಜಿಸಿರುವ ಜಾಗತಿಕ ಸಂಪರ್ಕ ಕಾರ್ಯಕ್ರಮದ ಭಾಗವಾಗಿ ಭಾಗವತ್ ಅವರು ಮೂರು ದಿನಗಳ ಭೇಟಿಗಾಗಿ ನ್ಯೂಯಾರ್ಕ್‌ಗೆ ತೆರಳಿದ್ದಾರೆ. ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳ ಉದ್ಯಮಿಗಳು ಹಾಗೂ ಕಾರ್ಯನಿರ್ವಾಹಕರೊಂದಿಗೆ ದುಂಡುಮೇಜಿನ ಸಭೆಯಲ್ಲಿ ಅವರು ಸಂವಾದ ನಡೆಸಿದರು.ಸಭೆಯಲ್ಲಿ ಭಾಗವಹಿಸಿದ್ದ ಮೋಟ್ವಾನಿ ಮಾತನಾಡಿ, ಭಾಗವತ್ ಅವರೊಂದಿಗೆ ಬಾಹ್ಯಾಕಾಶ, ದೂರಸಂಪರ್ಕ, ಶುದ್ಧ ಇಂಧನ, ತಂತ್ರಜ್ಞಾನ ಹಾಗೂ ಕ್ವಾಂಟಮ್ ಕಂಪ್ಯೂಟಿಂಗ್ ಸೇರಿದಂತೆ ವಿವಿಧ ಕ್ಷೇತ್ರಗಳ ಕುರಿತು ಚರ್ಚೆ ನಡೆಸಲಾಯಿತು ಎಂದು ತಿಳಿಸಿದ್ದಾರೆ.



'ವಿವಿಧ ಕೈಗಾರಿಕೆಗಳ ಪ್ರತಿನಿಧಿಗಳು ಭಾಗವತ್ ಅವರಿಗೆ ಹಲವು ಪ್ರಮುಖ ಪ್ರಶ್ನೆಗಳನ್ನು ಕೇಳಿದರು. ಭಾರತದಲ್ಲಿ ಕಂಪನಿಗಳು ಅಥವಾ ಉತ್ಪಾದನಾ ಘಟಕಗಳನ್ನು ಸ್ಥಾಪಿಸುವ ಸಂದರ್ಭದಲ್ಲಿ ರಾಜ್ಯ ಮಟ್ಟದಲ್ಲಿ ಇರುವ ಅಧಿಕಾರಶಾಹಿ ಅಡೆತಡೆಗಳನ್ನು ನಿವಾರಿಸಲು ಹಾಗೂ ಕಾರ್ಯವಿಧಾನಗಳನ್ನು ಸುಗಮಗೊಳಿಸಲು ಅವರು ಹೇಗೆ ನೆರವಾಗಬಹುದು ಎಂಬುದನ್ನು ತಿಳಿದುಕೊಳ್ಳಲು ಅನೇಕರು ಆಸಕ್ತಿ ತೋರಿದರು' ಎಂದು ಮೋಟ್ವಾನಿ ಹೇಳಿದ್ದಾರೆ. ಭಾಗವತ್ ಅವರು ಪ್ರಶ್ನೆಗಳಿಗೆ ಸಮಗ್ರವಾಗಿ ಉತ್ತರಿಸಿದರೂ, ತಾವು ಭಾರತ ಸರ್ಕಾರದ ಪರವಾಗಿ ಮಾತನಾಡುತ್ತಿಲ್ಲ ಎಂಬುದನ್ನು ಸ್ಪಷ್ಟಪಡಿಸಿದರು. ಅವರ ಉತ್ತರಗಳು ಕೆಲವು ವಿಷಯಗಳಲ್ಲಿ ನೆರವು ನೀಡಲು ಸಾಧ್ಯವಾಗಬಹುದು ಎಂಬ ವಿಶ್ವಾಸ ಮೂಡಿಸಿವೆ ಎಂದು ಅವರು ತಿಳಿಸಿದ್ದಾರೆ.

ಭಾಗವತ್ ಅವರೊಂದಿಗಿನ ಸಂವಾದದ ಕುರಿತು ಪ್ರತಿಕ್ರಿಯಿಸಿದ ಮೋಟ್ವಾನಿ, 'ಅವರಿಗೆ ಚಿನ್ನದ ಹೃದಯವಿದೆ. ಏಕೀಕೃತ ಭಾರತ ಮತ್ತು ಏಕೀಕೃತ ಜಗತ್ತಿನಲ್ಲಿ ಅವರು ನಂಬಿಕೆ ಇಟ್ಟಿದ್ದಾರೆ. ವಿವಿಧ ಧಾರ್ಮಿಕ ಸಮುದಾಯಗಳ ನಡುವೆ ಯಾವುದೇ ವ್ಯತ್ಯಾಸವನ್ನು ಅವರು ಕಾಣುವುದಿಲ್ಲ. ಅವರ ಪಾಲಿಗೆ ಎಲ್ಲ ಭಾರತೀಯರೂ ಒಂದು ಕುಟುಂಬ' ಎಂದು ಹೇಳಿದ್ದಾರೆ. ಭಾರತೀಯ ಯುವಕರ ಬಗ್ಗೆ ಭಾಗವತ್ ಅವರಿಗೆ ಅಪಾರ ವಿಶ್ವಾಸವಿದೆ. ಯುವಕರು ದೇಶದಲ್ಲಿ ತಮಗೆ ಬೇಕಾದ ಬದಲಾವಣೆಯನ್ನು ತರಬಲ್ಲರು ಎಂಬ ನಂಬಿಕೆ ಅವರಲ್ಲಿದೆ. ಭಾರತೀಯ ಯುವಕರು ಅಭೂತಪೂರ್ವ ರೀತಿಯಲ್ಲಿ ಬದಲಾವಣೆ ತರಲಿದ್ದಾರೆ ಎಂಬ ವಿಶ್ವಾಸದೊಂದಿಗೆ ಸಭೆಯಿಂದ ಹೊರಬಂದಿದ್ದೇನೆ ಎಂದು ಮೋಟ್ವಾನಿ ಹೇಳಿದ್ದಾರೆ.

ಅಮೆರಿಕ–ಭಾರತ ಸ್ನೇಹವನ್ನು ಮತ್ತಷ್ಟು ಬಲಪಡಿಸುವ ಹಾಗೂ ಉಭಯ ದೇಶಗಳ ನಡುವೆ ಸೇತುವೆ ನಿರ್ಮಿಸುವ ವಿಚಾರದಲ್ಲಿ ಭಾಗವತ್ ಅವರು ನಂಬಿಕೆ ಹೊಂದಿದ್ದಾರೆ. ಅಮೆರಿಕಕ್ಕೆ ಮತ್ತಷ್ಟು ಭೇಟಿ ನೀಡುವುದಾಗಿ ಅವರು ಭರವಸೆ ನೀಡಿದ್ದಾರೆ ಎಂದು ಮೋಟ್ವಾನಿ ತಿಳಿಸಿದ್ದಾರೆ.

ಆಗಸ್ಟ್ 29ರಂದು ನ್ಯೂಯಾರ್ಕ್‌ನ ಮ್ಯಾಡಿಸನ್ ಸ್ಕ್ವೇರ್ ಗಾರ್ಡನ್‌ನಲ್ಲಿ ನಡೆಯಲಿರುವ 'ಸಾರ್ವತ್ರಿಕ ಏಕತೆ' ಕಾರ್ಯಕ್ರಮಕ್ಕೂ ಮುನ್ನ ಈ ದುಂಡುಮೇಜಿನ ಸಭೆ ನಡೆದಿದೆ. ಕಾರ್ಯಕ್ರಮದಲ್ಲಿ ಭಾರತೀಯ ವಲಸಿಗರು ಸೇರಿದಂತೆ ವಿವಿಧ ಸಮುದಾಯಗಳ ಸುಮಾರು 6,000 ಮಂದಿಯನ್ನು ಭಾಗವತ್ ಉದ್ದೇಶಿಸಿ ಮಾತನಾಡುವ ನಿರೀಕ್ಷೆಯಿದೆ. ಕಾರ್ಯಕ್ರಮ ಆಯೋಜಿಸಿರುವ 'ಅಮೆರಿಕನ್ ಹಿಂದೂಸ್ ಫಾರ್ ಎಂಗೇಜ್‌ಮೆಂಟ್ ಅಂಡ್ ಡೈಲಾಗ್' ಸಂಸ್ಥೆ ಇದನ್ನು 'ಹೆಗ್ಗುರುತಿನ ರಕ್ಷಾ ಬಂಧನ ಸಭೆ' ಎಂದು ಬಣ್ಣಿಸಿದೆ. ಅಮೆರಿಕದಾದ್ಯಂತದ ಸಾವಿರಾರು ಹಿಂದೂಗಳು ಹಾಗೂ ನೂರಾರು ಹಿಂದೂ, ಸಾಂಸ್ಕೃತಿಕ, ಆಧ್ಯಾತ್ಮಿಕ, ಸೇವಾ ಮತ್ತು ಸಮುದಾಯ ಸಂಘಟನೆಗಳು ಕಾರ್ಯಕ್ರಮದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ.

# ಕೆಪಿಎಸ್‌ಸಿ ಅಧ್ಯಕ್ಷರ ನೇಮಕಾತಿ ಬಗ್ಗೆ ಮಾತಾಡೋ ಧೈರ್ಯ ಇಲ್ಲವೇ : ಎಚ್‌ಡಿಕೆಗೆ ಪ್ರಿಯಾಂಕ್ ಸವಾಲು

ಬೆಂಗಳೂರು: ಕೆಪಿಎಸ್‌ಸಿ ನೇಮಕಾತಿ ಅಕ್ರಮಗಳ ಕುರಿತು ಮಾತನಾಡುತ್ತಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಕೆಪಿಎಸ್‌ಸಿ ಅಧ್ಯಕ್ಷರ ನೇಮಕಾತಿಯ ಬಗ್ಗೆಯೂ ಮಾತನಾಡುವ ಧೈರ್ಯ ತೋರಿಸಲಿ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಸವಾಲು ಹಾಕಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಪಿಎಸ್‌ಸಿ ನೇಮಕಾತಿಯಲ್ಲಿ ಅಕ್ರಮದ ಬಗ್ಗೆ ಮಾತನಾಡುವ ಕುಮಾರಸ್ವಾಮಿ ಅವರು ಶಿವಶಂಕರಪ್ಪ ಹಾಗೂ ಸಾಹುಕಾರ್ ಅವರನ್ನು ಕೆಪಿಎಸ್‌ಸಿ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದು ಯಾರು ಎಂಬುದನ್ನೂ ಹೇಳಬೇಕು ಎಂದು ಆಗ್ರಹಿಸಿದರು. 'ಅವರ ಮನೆಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅಥವಾ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಫೋಟೊ ಇಲ್ಲ. ಯಡಿಯೂರಪ್ಪ ಮತ್ತು ವಿಜಯೇಂದ್ರ ಅವರ ಫೋಟೊ ಇದೆ ಎಂದು ಹೇಳಲಾಗುತ್ತಿದೆ. ?200 ಕೋಟಿ ನೀಡಿ ಕೆಪಿಎಸ್‌ಸಿಗೆ ಅಧ್ಯಕ್ಷರಾಗಿ ನೇಮಕ ಮಾಡಲಾಗಿತ್ತು ಎಂದು ಬಿಜೆಪಿ ಮಾಜಿ ಶಾಸಕರೇ ಆರೋಪಿಸಿದ್ದಾರೆ. ಇದು ನಿಜವೇ? ಇದರ ಬಗ್ಗೆ ಮಾತನಾಡಲು ಕುಮಾರಸ್ವಾಮಿ ಅವರಿಗೆ ಧೈರ್ಯವಿದೆಯೇ?' ಎಂದು ಪ್ರಶ್ನಿಸಿದರು.

ತಮ್ಮ ಮಾತಿನ ಶೈಲಿ ಕುರಿತು ಜೆಡಿಎಸ್ ನಾಯಕರು ಟೀಕಿಸುತ್ತಿರುವುದನ್ನು ಪ್ರಸ್ತಾಪಿಸಿದ ಅವರು, 'ನನ್ನ ನಾಲಿಗೆಯ ಬಗ್ಗೆ ಮಾತನಾಡಲು ಜೆಡಿಎಸ್‌ನವರಿಗೆ ಯಾವ ನೈತಿಕತೆ ಇದೆ? ಈವರೆಗೆ ಬಿಜೆಪಿ ನಾಯಕರಿಗೆ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಪ್ರಿಯಾಂಕ್ ಖರ್ಗೆ ಬೇಕಾಗಿದ್ದರು. ಈಗ ಜೆಡಿಎಸ್‌ಗೂ ನಾನು ಅನಿವಾರ್ಯವಾಗಿದ್ದರೆ ಮಾತನಾಡಿಕೊಳ್ಳಲಿ' ಎಂದು ವ್ಯಂಗ್ಯವಾಡಿದರು. ಕುಮಾರಸ್ವಾಮಿ ಅವರು ಈ ಹಿಂದೆ ಆರ್‌ಎಸ್‌ಎಸ್ ಅನ್ನು 'ವಿಷಸರ್ಪ' ಎಂದು ಟೀಕಿಸಿ ಲೇಖನ ಬರೆದಿದ್ದರು. ಆಗ ಅವರ ವಿಚಾರಧಾರೆ ಮೆಚ್ಚಿ ತಾವು ಅಭಿಮಾನಿಯಾಗಿದ್ದೆ. ಆದರೆ, ಅಧಿಕಾರಕ್ಕಾಗಿ ತತ್ವ–ಸಿದ್ಧಾಂತಗಳನ್ನು ಬದಿಗೊತ್ತುವವರ ಬಗ್ಗೆ ಏನು ಹೇಳಬೇಕು? ಜೆಡಿಎಸ್–ಬಿಜೆಪಿಯಿಂದ ತಾನು ಕಲಿಯಬೇಕಾದದ್ದು ಏನೂ ಇಲ್ಲ ಎಂದರು.

**ಜ್ಞಾನೇಂದ್ರ ಕುಮಾರ್ ವಿಚಾರ**

ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ಅವರ ವಿಚಾರದಲ್ಲಿ ಕುಮಾರಸ್ವಾಮಿ ಮಾಡುತ್ತಿರುವ ಆರೋಪಗಳಿಗೆ ಪ್ರತಿಕ್ರಿಯಿಸಿದ ಪ್ರಿಯಾಂಕ್ ಖರ್ಗೆ, 'ಅವರು ಓಡಿ ಹೋಗಿದ್ದಾರೆಯೇ ಅಥವಾ ನಮ್ಮ ವಶದಲ್ಲಿದ್ದಾರೆಯೇ ಎಂಬುದು ಕುಮಾರಸ್ವಾಮಿಗೆ ಹೇಗೆ ಗೊತ್ತು? ಎಲ್ಲ ವಿಚಾರಗಳನ್ನೂ ಬಹಿರಂಗವಾಗಿ ಚರ್ಚಿಸಲು ಸಾಧ್ಯವಿಲ್ಲ' ಎಂದರು. ಒಬ್ಬ ಅಧಿಕಾರಿ ಲಿಖಿತವಾಗಿ ರಜೆಗಾಗಿ ಅರ್ಜಿ ಸಲ್ಲಿಸಿದರೆ ಸರ್ಕಾರ ಅದನ್ನು ನಂಬಬೇಕಲ್ಲವೇ? ಜ್ಞಾನೇಂದ್ರ ಕುಮಾರ್ ಎಲ್ಲಿದ್ದಾರೆ ಎಂಬುದು ತಮಗೆ ಗೊತ್ತಿದೆ. ಆದರೆ, ಆ ಮಾಹಿತಿಯನ್ನು ಕುಮಾರಸ್ವಾಮಿ ಅಥವಾ ಬಿಜೆಪಿಯವರಿಗೆ ನೀಡುವ ಅಗತ್ಯವಿಲ್ಲ ಎಂದು ಹೇಳಿದರು. ಜ್ಞಾನೇಂದ್ರ ಕುಮಾರ್ ಮರಳಿ ಕರ್ತವ್ಯಕ್ಕೆ ಹಾಜರಾಗಲಿದ್ದಾರೆ. ಬಳಿಕ ಅವರು ನೀಡಿರುವ ಮಾಹಿತಿ ಸತ್ಯವೇ ಅಥವಾ ಸುಳ್ಳೇ ಎಂಬುದನ್ನು ಪರಿಶೀಲಿಸಲಾಗುವುದು ಎಂದರು.



**'ಕುಮಾರಸ್ವಾಮಿ ರಾಜ್ಯದ ಪರವಾಗಿ ಧ್ವನಿ ಎತ್ತಿದ್ದಾರೆಯೇ'**

ಕುಮಾರಸ್ವಾಮಿ ಅವರು ಕೇಂದ್ರ ಸಚಿವರಾಗಿರುವುದರಿಂದ ರಾಜ್ಯಕ್ಕೆ ಅವರಿಂದ ಆಗಿರುವ ಲಾಭವೇನು? ರಾಜ್ಯದ ಪರವಾಗಿ ಅವರು ಯಾವಾಗಲಾದರೂ ಕೇಂದ್ರದಲ್ಲಿ ಧ್ವನಿ ಎತ್ತಿದ್ದಾರೆಯೇ ಎಂದು ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು. 'ಪ್ರಿಯಾಂಕ್ ಖರ್ಗೆ ಅವರನ್ನು ಟೀಕಿಸಿದರೆ ಬಿಜೆಪಿ ಮತ್ತು ಜೆಡಿಎಸ್‌ನವರಿಗೆ ಕೇಶವಕೃಪಾದಲ್ಲಿ ಅಂಕಗಳು ಸಿಗುತ್ತವೆ. ಅದಕ್ಕಾಗಿ ಪ್ರತಿದಿನ ಬೆಳಗ್ಗೆ ಎದ್ದ ತಕ್ಷಣ ನನ್ನನ್ನು ಟೀಕಿಸುವುದನ್ನೇ ಅವರು ಫ್ಯಾಷನ್ ಮಾಡಿಕೊಂಡಿದ್ದಾರೆ. ನನ್ನಿಂದಾಗಿ ಬಿಜೆಪಿಯ ಬಾಡಿಗೆ ಭಾಷಣಕಾರರಿಗೆ ಹಾಗೂ ಸಾಮಾಜಿಕ ಜಾಲತಾಣದಲ್ಲಿರುವವರಿಗೆ ಸಂಬಳ ಸಿಗುತ್ತಿದೆ' ಎಂದು ವ್ಯಂಗ್ಯವಾಡಿದರು.

**ಪ್ರಜ್ವಲ್ ರೇವಣ್ಣ ವಿಚಾರ**

ಪ್ರಜ್ವಲ್ ರೇವಣ್ಣ ಪ್ರಕರಣದ ಕುರಿತು ಕುಮಾರಸ್ವಾಮಿ ನೀಡಿರುವ ಹೇಳಿಕೆಗಳಿಗೆ ಪ್ರತಿಕ್ರಿಯಿಸಿದ ಪ್ರಿಯಾಂಕ್ ಖರ್ಗೆ, 'ಹಾಸನದಲ್ಲಿ ಮಹಿಳೆಯರ ಮೇಲೆ ಅತ್ಯಾಚಾರ ನಡೆಸುವಂತೆ ನಾವು ಹೇಳಿದ್ದೇವೆ? ಸಂತ್ರಸ್ತ ಮಹಿಳೆಯರ ಕುರಿತು ಮಾತನಾಡಲು ಕುಮಾರಸ್ವಾಮಿಗೆ ಸಾಧ್ಯವಾಗುತ್ತಿಲ್ಲ' ಎಂದು ಟೀಕಿಸಿದರು. ಗೃಹ ಸಚಿವನಾಗಿ ಪರಪ್ಪನ ಅಗ್ರಹಾರ ಸೇರಿದಂತೆ ರಾಜ್ಯದ ಎಲ್ಲ ಕಾರಾಗೃಹಗಳನ್ನು ಸ್ವಚ್ಛಗೊಳಿಸುವುದು ತಮ್ಮ ಕರ್ತವ್ಯ. ಆ ಕೆಲಸವನ್ನು ತಾವು ಮಾಡುತ್ತಿದ್ದೇವೆ ಎಂದರು.'ಜೈಲಿನಲ್ಲಿರುವ ಪ್ರಜ್ವಲ್ ರೇವಣ್ಣ ಮೊಬೈಲ್ ಬಳಸಬಹುದೇ? ಅವರಿಂದ ಕುಮಾರಸ್ವಾಮಿಗೆ ಕರೆಗಳು ಬರುತ್ತಿದ್ದವೇ? ಈ ಬಗ್ಗೆ ಮಾಹಿತಿ ಇದ್ದರೂ ವಿಷಯವನ್ನು ಮುಚ್ಚಿಟ್ಟಿದ್ದರೇ?' ಎಂದು ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

# ಈಗ ಚುನಾವಣೆ ನಡೆದರೆ 326 ಸ್ಥಾನಗಳೊಂದಿಗೆ ಎನ್‌ಡಿಎಗೆ ಅಧಿಕಾರ ಗ್ಯಾರಂಟಿ : ಸಮೀಕ್ಷೆ

ನವದೆಹಲಿ: ದೇಶದ ರಾಜಕೀಯ ವಲಯದಲ್ಲಿ ತೀವ್ರ ಕುತೂಹಲ ಮೂಡಿಸಿರುವ ಇಂಡಿಯಾ ಟುಡೇ–ಸಿವೋಟರ್ ಮೂಡ್ ಆಫ್ ದಿ ನೇಷನ್ ಸಮೀಕ್ಷೆ (ಎಂಒಟಿಎನ್)ಯ ವರದಿ ಹೊರಬಂದಿದ್ದು, ಪ್ರಸ್ತುತ ರಾಜಕೀಯ ಪರಿಸ್ಥಿತಿ ಹಾಗೂ ಇಂದಿನ ವಾಸ್ತವಿಕತೆಯ ಸಮಗ್ರ ಚಿತ್ರಣವನ್ನು ಇದು ನೀಡಿದೆ.

**ಎನ್‌ಡಿಎಗೆ ಮುನ್ನಡೆ:**

ಈಗ ಲೋಕಸಭಾ ಚುನಾವಣೆ ನಡೆದರೆ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟವು 326 ಸ್ಥಾನಗಳನ್ನು ಗಳಿಸುವ ಮೂಲಕ ಆರಾಮದಾಯಕ ಬಹುಮತದೊಂದಿಗೆ ಅಧಿಕಾರವನ್ನು ಉಳಿಸಿಕೊಳ್ಳಲಿದೆ ಎಂದು ಸಮೀಕ್ಷೆ ಭವಿಷ್ಯ ನುಡಿದಿದೆ. ಜನವರಿಯಲ್ಲಿ ನಡೆದ ಹಿಂದಿನ ಸಮೀಕ್ಷೆಯಲ್ಲಿ ಎನ್‌ಡಿಎ 352 ಸ್ಥಾನಗಳನ್ನು ಪಡೆಯಲಿದೆ ಎಂದು ಅಂದಾಜಿಸಲಾಗಿತ್ತು. ಪ್ರಸ್ತುತ ಸಮೀಕ್ಷೆಯಲ್ಲಿ ಈ ಸಂಖ್ಯೆ 326ಕ್ಕೆ ಇಳಿದಿದ್ದು, ಆಡಳಿತಾರೂಢ ಮೈತ್ರಿಕೂಟದ ಸ್ಥಾನಗಳಲ್ಲಿ 26ರಷ್ಟು ಕುಸಿತ ಕಂಡುಬಂದಿದೆ.

**ಬಿಜೆಪಿ–ಕಾಂಗ್ರೆಸ್ ಸ್ಥಾನಗಳು**

ಪ್ರಸ್ತುತ ಸಮೀಕ್ಷೆಯ ಪ್ರಕಾರ ಬಿಜೆಪಿಗೆ ಪ್ರತ್ಯೇಕವಾಗಿ 261 ಸ್ಥಾನಗಳು ಸಿಗುವ ನಿರೀಕ್ಷೆಯಿದೆ (ಜನವರಿಯಲ್ಲಿ ಇದು 287 ಇತ್ತು). ಮತ್ತೊಂದೆಡೆ, ಕಾಂಗ್ರೆಸ್ ಪಕ್ಷಕ್ಕೆ ಗಮನಾರ್ಹ ಲಾಭವಾಗಿದ್ದು, ಹಿಂದಿನ ಸಮೀಕ್ಷೆಯಲ್ಲಿದ್ದ 80 ಸ್ಥಾನಗಳಿಂದ ಈ ಬಾರಿ 106 ಸ್ಥಾನಗಳಿಗೆ ಏರಿಕೆಯಾಗುವ ಸಾಧ್ಯತೆಯಿದೆ.

**ಇಂಡಿಯಾ ಬ್ಲಾಕ್ ಸ್ಥಿತಿ:**

ಕಾಂಗ್ರೆಸ್ ನೇತೃತ್ವದ ಇಂಡಿಯಾ ಮೈತ್ರಿಕೂಟಕ್ಕೆ ಒಟ್ಟಾರೆ 185 ಸ್ಥಾನಗಳು ಸಿಗಬಹುದು ಎಂದು ಅಂದಾಜಿಸಲಾಗಿದೆ. ಇದು 2024ರ ಚುನಾವಣೆಯಲ್ಲಿ ಗಳಿಸಿದ್ದ 234 ಸ್ಥಾನಗಳಿಗೆ ಹೋಲಿಸಿದರೆ ಕಡಿಮೆ.



**ಮತ ಹಂಚಿಕೆ ವಿವರ:**

ಎನ್‌ಡಿಎ ಮೈತ್ರಿಕೂಟದ ಮತ ಹಂಚಿಕೆಯು ಜನವರಿಯ ಶೇ. 47 ರಿಂದ ಶೇ. 45.1ಕ್ಕೆ ಕುಸಿದಿದೆ. ಅದೇ ಸಮಯದಲ್ಲಿ, ಇಂಡಿಯಾ ಮೈತ್ರಿಕೂಟದ ಮತ ಹಂಚಿಕೆಯು ಶೇ. 39.1ರಷ್ಟು ಇರಲಿದೆ ಎಂದು ಸಮೀಕ್ಷೆ ತಿಳಿಸಿದೆ.

**ಬದಲಾವಣೆಗಳಿಗೆ ಪ್ರಮುಖ ಕಾರಣಗಳು:**

ಶಿಕ್ಷಣ ವ್ಯವಸ್ಥೆಯಲ್ಲಿನ ಅಕ್ರಮಗಳು, ಪರೀಕ್ಷಾ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಗಳು ಹಾಗೂ ಯುವ ಮತದಾರರ (ಜನರೇಷನ್ ಝಡ್) ಅಸಮಾಧಾನದಂತಹ ಇತ್ತೀಚಿನ ವಿದ್ಯಮಾನಗಳು ಬಿಜೆಪಿಯ ಬೆಂಬಲದಲ್ಲಿ ಸ್ವಲ್ಪ ಮಟ್ಟಿನ ಸವೆತ ಉಂಟುಮಾಡಿದೆ. ಜುಲೈ ತಿಂಗಳಲ್ಲಿ ದೆಹಲಿಯಲ್ಲಿ ನಡೆದ ವಿದ್ಯಾರ್ಥಿಗಳ ನಿರಂತರ ಪ್ರತಿಭಟನೆ ಹಾಗೂ ಪ್ರಮುಖ ಬೆಳವಣಿಗೆಗಳು ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದ್ದವು. ಮತ್ತೊಂದೆಡೆ, ಮಹಿಳಾ ಮೀಸಲಾತಿ ಹಾಗೂ ವಿದ್ಯಾರ್ಥಿ ಸಮಸ್ಯೆಗಳಂತಹ ಪ್ರಮುಖ ವಿಷಯಗಳನ್ನು ಮುನ್ನೆಲೆಗೆ ತರುವ ಮೂಲಕ ಕಾಂಗ್ರೆಸ್ ಮತ್ತು ವಿರೋಧ ಪಕ್ಷಗಳು ತಮ ಜನಪ್ರಿಯತೆಯನ್ನು ಹೆಚ್ಚಿಸಿಕೊಳ್ಳಲು ಯಶಸ್ವಿಯಾಗಿರುವುದು ಸಮೀಕ್ಷೆಯಿಂದ ವ್ಯಕ್ತವಾಗಿದೆ. ಜುಲೈ 1 ರಿಂದ ಆಗಸ್ಟ್ 25ರವರೆಗೆ ನೇರವಾಗಿ ಸಮೀಕ್ಷೆ ನಡೆಸಲಾದ 25,184 ಜನರ ಮಾದರಿ ಹಾಗೂ ಕಳೆದ ಆರು ತಿಂಗಳುಗಳಲ್ಲಿ ನಡೆಸಲಾದ ಒಟ್ಟು 91,795 ಸಂದರ್ಶನಗಳ ಆಧಾರದ ಮೇಲೆ ಈ ದ್ವೈವಾರ್ಷಿಕ ಸಮೀಕ್ಷೆಯನ್ನು ಸಿದ್ಧಪಡಿಸಲಾಗಿದೆ.

**ಉತ್ತರಪ್ರದೇಶದಲ್ಲಿ ಬದಲಾದ ಚಿತ್ರಣ:**

ದೇಶದ ಅತಿ ಹೆಚ್ಚು ಲೋಕಸಭಾ ಸ್ಥಾನಗಳನ್ನು ಹೊಂದಿರುವ ಉತ್ತರ ಪ್ರದೇಶದಲ್ಲಿ ಸಮೀಕ್ಷೆ ಇನ್ನಷ್ಟು ಕುತೂಹಲಕಾರಿ ಚಿತ್ರಣ ನೀಡಿದೆ. ಇಲ್ಲಿ ಇಂಡಿಯಾ ಮೈತ್ರಿಕೂಟಕ್ಕೆ 41 ಸ್ಥಾನಗಳು, ಎನ್‌ಡಿಗೆ 38 ಸ್ಥಾನಗಳು ಸಿಗುವ ಸಾಧ್ಯತೆಯನ್ನು ಸಮೀಕ್ಷೆ ಸೂಚಿಸಿದೆ. ಯುವಕರ ನಿರುದ್ಯೋಗ, ಪರೀಕ್ಷಾ ಪಾರದರ್ಶಕತೆ ಮತ್ತು ಉಏಗೆ ಸಂಬಂಧಿಸಿದ ವಿಚಾರಗಳು ಮತದಾರರ ಮನಃಸ್ಥಿತಿಯ ಮೇಲೆ ಪರಿಣಾಮ ಬೀರುತ್ತಿವೆ ಎಂದು ಸಮೀಕ್ಷೆಯ ವಿಶ್ಲೇಷಣೆ ಸೂಚಿಸುತ್ತದೆ. ಆದರೆ ಇದನ್ನು ಅಂತಿಮ ಚುನಾವಣಾ ಫಲಿತಾಂಶವೆಂದು ಪರಿಗಣಿಸುವಂತಿಲ್ಲ; ರಾಜ್ಯದ ರಾಜಕೀಯ ಸಮೀಕರಣಗಳು ಮುಂದಿನ ಮೂರು ವರ್ಷಗಳಲ್ಲಿ ಹಲವು ಬಾರಿ ಬದಲಾಗುವ ಸಾಧ್ಯತೆ ಇದೆ.

**ನರೇಂದ್ರಮೋದಿ ಪ್ರಭಾವ**

ಬಿಜೆಪಿಯ ಸ್ಥಾನಗಳಲ್ಲಿ ಕುಸಿತ ಕಂಡುಬಂದರೂ ಪ್ರಧಾನಿ ನರೇಂದ್ರ ಮೋದಿ ಅವರ ವೈಯಕ್ತಿಕ ಜನಪ್ರಿಯತೆ ಎನ್‌ಡಿಗೆ ಪ್ರಮುಖ ಬಲವಾಗಿ ಮುಂದುವರಿದಿದೆ. ಇತ್ತೀಚಿನ ಎಂಒಟಿಎನ್‌ನಲ್ಲಿ ಮೋದಿ ಅವರು ಮುಂದಿನ ಪ್ರಧಾನಿಯಾಗಿ ಅತ್ಯಂತ ಆದ್ಯತೆಯ ಆಯ್ಕೆಯಾಗಿದ್ದು, ಅವರ ನಾಯಕತ್ವಕ್ಕೆ ಸಂಬಂಧಿಸಿದ ಬೆಂಬಲದಲ್ಲಿ ದೊಡ್ಡ ಕುಸಿತ ಕಂಡುಬಂದಿಲ್ಲ. ಇದು ಒಂದು ಪ್ರಮುಖ ರಾಜಕೀಯ ವ್ಯತ್ಯಾಸವನ್ನು ತೋರಿಸುತ್ತದೆ:ಬಿಜೆಪಿಯ ಸ್ಥಾನಗಳು ಕುಸಿಯಬಹುದು. ಆದರೆ ಮೋದಿಯವರ ವೈಯಕ್ತಿಕ ನಾಯಕತ್ವದ ಮೇಲಿನ ಬೆಂಬಲ ಅದೇ ಪ್ರಮಾಣದಲ್ಲಿ ಕುಸಿಯಬೇಕೆಂದಿಲ್ಲ. ಇದೇ ಎನ್‌ಡಿಗೆ 326 ಸ್ಥಾನಗಳಂತಹ ಬಲಿಷ್ಠ ಅಂದಾಜಿನಲ್ಲಿರಿಸುವ ಪ್ರಮುಖ ಅಂಶಗಳಲ್ಲಿ ಒಂದಾಗಿದೆ.

# ಅದ್ಭುತ ಹೋರಾಟಗಾರ್ತಿ..,ಕ್ರಿಸ್ಟಿಯಾನ ಸ್ಯಾಂತೊಸ್

ಕೇವಲ ಎಂಟು ವರ್ಷದ ಬಾಲಕಿ ಕ್ರಿಸ್ಟಿಯಾನ ಸ್ಯಾಂತೊಸ್ ಳಿಗೆ ದಿನಕ್ಕೆ 150ಕ್ಕೂ ಹೆಚ್ಚು ಬಾರಿ ಸೆಳವು ಉಂಟಾಗುತ್ತಿತ್ತು.

ನಮ್ಮ ಮೆದುಳಿನ ನರಕೋಶಗಳು ನಿಯಂತ್ರಿತ ವಿದ್ಯುತ್ ತರಂಗಗಳ ಮೂಲಕ ಕಾರ್ಯನಿರ್ವಹಿಸುತ್ತವೆ. ಆ ವಿದ್ಯುತ್ ತರಂಗಗಳ ಹರಿಯುವಿಕೆಯಲ್ಲಿ ಹಠಾತ್ ಏರುಪೇರಾದಾಗ ಸೆಳವು, ಫಿಟ್ಸ್ ಅಥವಾ ಮೂರ್ಛೆರೋಗ ಉಂಟಾಗುತ್ತದೆ. ಆಕೆಗೆ ಇದ್ದುದು ಎನ್ಸೆಫಲೈಟಿಸ್ ಎಂಬ ಅತ್ಯಂತ ವಿರಳವಾದ ನರರೋಗ ಸಂಬಂಧಿತ ತೊಂದರೆ. ಅದು ಆಕೆಯ ಮೆದುಳಿನ ಒಂದು ಭಾಗವನ್ನು ಸಂಪೂರ್ಣವಾಗಿ ಹಾಳು ಮಾಡಿತ್ತು. ಔಷಧಿ ಚಿಕಿತ್ಸೆ ಕೂಡ ವಿಫಲವಾಗಿತ್ತು. ಎಲ್ಲ ಬಗೆಯ ಚಿಕಿತ್ಸಾ ಕ್ರಮಗಳು ವಿಫಲವಾದ ನಂತರ ವೈದ್ಯರು ಆಕೆಗೆ 14 ಗಂಟೆಗಳ ಕಾಲದ ಅತಿ ದೊಡ್ಡ ಶಸ್ತ್ರಚಿಕಿತ್ಸೆ ಹೆಮಿಸ್ಪೆರಕ್ಟೊಮಿ ಮಾಡುವ ಮೂಲಕ ಆಕೆಯ ಸಂಪೂರ್ಣ ಬಲ ಮೆದುಳನ್ನು ತೆಗೆದುಹಾಕುವ ಶಸ್ತ್ರಚಿಕಿತ್ಸೆ ಅದಾಗಿತ್ತು. ಅತ್ಯಂತ ಕಷ್ಟಕರವಾದ ಈ ಶಸ್ತ್ರಚಿಕಿತ್ಸೆಯ ನಂತರ ಕ್ರಿಸ್ಟಿಯಾನ ಮುಂದೆ ಸಹಜ ಬದುಕನ್ನು ನಡೆಸಲು ಸಾಧ್ಯವಾಗುವುದಿಲ್ಲ ಎಂಬುದು ಅವರ ಹೇಳಿಕೆಯಾಗಿತ್ತು.

ತಂದೆ ತಾಯಿಯರ ಅನುಮತಿಯ ನಂತರ ಕ್ರಿಸ್ಟಿಯಾನ ಈ ಶಸ್ತ್ರಚಿಕಿತ್ಸೆಗೆ ಒಳಗಾದಳು.. ಆದರೆ ನಂತರ ನಡೆದದ್ದು ಮಾತ್ರ ವೈದ್ಯ ಲೋಕದ ಅಚ್ಚರಿಗೂ ಕೂಡ ಕಾರಣವಾಯಿತು. ಮೆದುಳಿನ ಉಳಿದ ಅರ್ಧ ಭಾಗವು ಆಕೆಯ ತಲೆಯ ಭಾಗದಿಂದ ತೆಗೆದು ಹಾಕಿದ ಮೆದುಳಿನ ಭಾಗದ ಕೆಲಸಗಳನ್ನು ತಂತಾನೆ ಅಳವಡಿಸಿಕೊಂಡು ಕಾರ್ಯನಿರ್ವಹಿಸಲು ಆರಂಭಿಸಿತು. ತನ್ನ ದೇಹದ ಎಡ ಭಾಗದ ಕೆಲ ಚಟುವಟಿಕೆಗಳನ್ನು ಆಕೆ ನಿರ್ವಹಿಸಲು ಸಾಧ್ಯವಾಗಲಿಲ್ಲವಾದರೂ ಕೂಡ ಆಕೆಯ ವ್ಯಕ್ತಿತ್ವ, ನೆನಪಿನ ಶಕ್ತಿ ಹಾಗೂ ಜಾಣ್ಮೆ ಗಳು ಆಕೆಯ ಪಾಲಿಗೆ ಹಾಗೆಯೇ ಉಳಿದುಕೊಂಡವು. ಇಂತಹ ಕಠಿಣ ಶಸ್ತ್ರಚಿಕಿತ್ಸೆಯಿಂದ ಕೇವಲ ಆಕೆ ಬದುಕಿ ಉಳಿಯಲಿಲ್ಲ ಬದಲಾಗಿ ಮುಂದಿನ ದಿನಗಳಲ್ಲಿ ಆಕೆ ತನ್ನ ಹೈಸ್ಕೂಲು ಹಾಗೂ ಕಾಲೇಜ್ ಶಿಕ್ಷಣವನ್ನು ಪೂರೈಸಿ ಸ್ನಾತಕೋತ್ತರ ಪದವಿಯನ್ನು ಕೂಡ ಪಡೆದಳು. ವಿಶೇಷವೆಂದರೆ ವಾಕ್ ಮತ್ತು ಭಾಷಾ ರೋಗಶಾಸ್ತ್ರಜ್ಞಳಾಗಿ ಆಕೆ ಮಾತನಾಡುವ ತೊಂದರೆಯಿಂದ ಬಳಲುತ್ತಿರುವ, ಧ್ವನಿ ಪೆಟ್ಟಿಗೆಯ ಸಮಸ್ಯೆಯಿಂದ ಒದ್ದಾಡುವ, ಭಾಷೆಯ ಗ್ರಹಿಕೆಯಲ್ಲಿ ತೊಂದರೆಯನ್ನು ಅನುಭವಿಸುವ ಜನರಿಗೆ ಸಹಾಯಕವಾಗುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಿದಳು.



ಒಂದೊಮ್ಮೆ ವೈದ್ಯರೇ ಆಕೆಯ ಶಸ್ತ್ರಚಿಕಿತ್ಸೆಯ ಪರಿಣಾಮವಾಗಿ ಆಕೆಯ ಬದುಕು ಸಂಪೂರ್ಣ ಪರಾವಲಂಬಿಯಾಗಬಹುದು ಎಂದು ಹೆದರಿದ್ದರೆ, ಅದಕ್ಕೆ ಸಂಪೂರ್ಣ ತದ್ವಿರುದ್ಧವಾಗಿ ಕ್ರಿಸ್ಟಿಯಾನ ತನ್ನ ಬದುಕನ್ನು ಅತ್ಯಂತ ಶ್ರದ್ಧೆ ಹಾಗೂ ಉದ್ದೇಶದೊಂದಿಗೆ ಹಂತ ಹಂತವಾಗಿ ಕಟ್ಟಿಕೊಂಡಳು. ನೋಡಿದಿರಾ ಸ್ನೇಹಿತರೆ! ನಮ್ಮ ಮೆದುಳಿನ ಕಾರ್ಯ ಚಟುವಟಿಕೆ ಅತ್ಯದ್ಭುತ. ನಾವು ನಿರೀಕ್ಷಿಸದ ಮಟ್ಟದಲ್ಲಿ, ಅಸಾಧ್ಯವನ್ನು ಸಾಧ್ಯವಾಗಿಸುವ ನಿಟ್ಟಿನಲ್ಲಿ ಅದು ಕಾರ್ಯನಿರ್ವಹಿಸುತ್ತದೆ. ನಮ್ಮ ಬದುಕೇ ಹಾಗೆ ಅಲ್ಲವೇ ಎಲ್ಲ ರೀತಿಯ ಅವಕಾಶಗಳು ಹಾಗೂ ಐಷಾರಾಮಗಳನ್ನು ಹೊಂದಿದ್ದರೂ ಕೂಡ ಬದುಕಿನಲ್ಲಿ ಮುಂದೆ ಸಾಗಲು ಒದ್ದಾಡುವ ಬಹುತೇಕ ಯುವ ಜನತೆ ಕ್ರಿಸ್ಟಿಯಾನಾಳ ಅದ್ಭುತ ಶಕ್ತಿಯ ಅರಿವನ್ನು ತಮ್ಮದಾಗಿಸಿಕೊಳ್ಳಬೇಕು. ಏನಂತೀರಾ ಸ್ನೇಹಿತರೇ




ವೀಣಾ ಹೇಮಂತ್ ಗೌಡ ಪಾಟೀಲ್

# ಜನಮನ ಗೆದ್ದ ಜನನಾಯಕ ರಾಮಕೃಷ್ಣ ಹೆಗಡೆ

ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಕೆಲವು ನಾಯಕರು ಅಧಿಕಾರದ ಗದ್ದುಗೆಯ ಮೇಲೆ ಕುಳಿತು ಆಡಳಿತ ನಡೆಸಿದವರಾಗಿ ಮಾತ್ರ ನೆನಪಾಗುವುದಿಲ್ಲ. ಅವರು ಜನರ ಬದುಕಿನೊಂದಿಗೆ ಬೆರೆತು, ಸಮಾಜದ ನೋವು ನಲಿವುಗಳಿಗೆ ಸ್ಪಂದಿಸಿ, ಆಡಳಿತಕ್ಕೆ ಹೊಸ ದಿಕ್ಕು ತೋರಿಸಿದವರಾಗಿ ಇತಿಹಾಸದಲ್ಲಿ ಶಾಶ್ವತವಾಗಿ ಉಳಿಯುತ್ತಾರೆ. ಅಂತಹ ಅಪರೂಪದ ಜನನಾಯಕರ ಸಾಲಿನಲ್ಲಿ ಲಿಂಗೈಕ್ಯ ರಾಮಕೃಷ್ಣ ಹೆಗಡೆ ಅವರ ಹೆಸರು ಅತ್ಯಂತ ಗೌರವದಿಂದ ಉಲ್ಲೇಖಿಸಬೇಕಾದದ್ದು. ಸರಳತೆ, ಸೌಜನ್ಯ, ಪ್ರಜಾಪ್ರಭುತ್ವದ ನಂಬಿಕೆ, ಸಾಮಾಜಿಕ ಕಳಕಳಿ, ಆಡಳಿತಾತ್ಮಕ ದೂರದೃಷ್ಟಿ ಮತ್ತು ಅಭಿವೃದ್ಧಿಯ ಚಿಂತನೆಗಳನ್ನು ತಮ್ಮ ಸಾರ್ವಜನಿಕ ಬದುಕಿನ ಪ್ರಮುಖ ಮೌಲ್ಯಗಳನ್ನಾಗಿ ಮಾಡಿಕೊಂಡಿದ್ದ ಹೆಗಡೆಯವರು ಕರ್ನಾಟಕ ಮಾತ್ರವಲ್ಲ, ಭಾರತೀಯ ರಾಜಕಾರಣದಲ್ಲಿಯೂ ವಿಶಿಷ್ಟ ಛಾಪು ಮೂಡಿಸಿದ ನಾಯಕರು.

ರಾಮಕೃಷ್ಣ ಹೆಗಡೆಯವರ ರಾಜಕೀಯ ಜೀವನವನ್ನು ಕೇವಲ ಮುಖ್ಯಮಂತ್ರಿ ಅಥವಾ ಕೇಂದ್ರ ಸಚಿವರಾಗಿ ಅವರು ನಿರ್ವಹಿಸಿದ ಹುದ್ದೆಗಳ ಮೂಲಕ ಅಳೆಯುವುದು ಅವರ ವ್ಯಕ್ತಿತ್ವವನ್ನು ಸೀಮಿತಗೊಳಿಸಿದಂತಾಗುತ್ತದೆ. ಜನಸಾಮಾನ್ಯರ ಬದುಕಿನಲ್ಲಿ ಸರ್ಕಾರದ ಪಾತ್ರವೇನು? ಅಧಿಕಾರವು ಯಾರಿಗಾಗಿ? ಅಭಿವೃದ್ಧಿಯ ಫಲ ಯಾರಿಗೆ ತಲುಪಬೇಕು? ಗ್ರಾಮೀಣ ಜನರ ಬದುಕನ್ನು ಹೇಗೆ ಸುಧಾರಿಸಬೇಕು? ಪ್ರಜಾಪ್ರಭುತ್ವವನ್ನು ಜನರ ಮನೆ ಬಾಗಿಲಿಗೆ ಹೇಗೆ ಕೊಂಡೊಯ್ಯಬೇಕು? ಎಂಬ ಪ್ರಶ್ನೆಗಳಿಗೆ ಅವರು ತಮ್ಮ ಆಡಳಿತದ ಮೂಲಕ ಉತ್ತರ ಹುಡುಕಿದ ನಾಯಕರು. ಕರ್ನಾಟಕದ ಮುಖ್ಯಮಂತ್ರಿಯಾಗಿ ರಾಮಕೃಷ್ಣ ಹೆಗಡೆಯವರು ಅಧಿಕಾರ ಸ್ವೀಕರಿಸಿದ ಸಂದರ್ಭದಲ್ಲಿ ರಾಜ್ಯದ ಆಡಳಿತ ವ್ಯವಸ್ಥೆಗೆ ಹೊಸ ಚೈತನ್ಯ ನೀಡುವ ಅಗತ್ಯವಿತ್ತು. ಆಡಳಿತವು ಕೇವಲ ರಾಜಧಾನಿಯಲ್ಲಿ ಕುಳಿತು ಕಡತಗಳನ್ನು ವಿಲೇವಾರಿ ಮಾಡುವ ವ್ಯವಸ್ಥೆಯಾಗದೆ, ಗ್ರಾಮಗಳಿಗೂ ತಲುಪಬೇಕು ಎಂಬ ಚಿಂತನೆ ಅವರಲ್ಲಿ ಗಟ್ಟಿಯಾಗಿತ್ತು. ಈ ಕಾರಣದಿಂದಲೇ ವಿಕೇಂದ್ರೀಕರಣಕ್ಕೆ ಅವರು ವಿಶೇಷ ಮಹತ್ವ ನೀಡಿದರು. ಅಧಿಕಾರ ಮತ್ತು ನಿರ್ಧಾರ ಕೈಗೊಳ್ಳುವ ಅವಕಾಶಗಳು ಗ್ರಾಮೀಣ ಮಟ್ಟದ ಜನಪ್ರತಿನಿಧಿಗಳಿಗೂ ಸಿಗಬೇಕು ಎಂಬ ಆಶಯವು ಅವರ ಆಡಳಿತದ ಪ್ರಮುಖ ವೈಶಿಷ್ಟ್ಯವಾಗಿತ್ತು.

ಗ್ರಾಮೀಣ ಅಭಿವೃದ್ಧಿ ಮತ್ತು ಸ್ಥಳೀಯ ಸ್ವರಾಜ್ಯ ವ್ಯವಸ್ಥೆಗೆ ಬಲ ನೀಡುವ ದೃಷ್ಟಿಯಿಂದ ಅವರು ಕೈಗೊಂಡ ಕ್ರಮಗಳು ಕರ್ನಾಟಕದ ಆಡಳಿತ ಇತಿಹಾಸದಲ್ಲಿ ಮಹತ್ವದ ಮೈಲಿಗಲ್ಲುಗಳಾಗಿವೆ. ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಸಂಸ್ಥೆಗಳು ಕೇವಲ ಸರ್ಕಾರದ ಆದೇಶಗಳನ್ನು ಅನುಷ್ಠಾನಗೊಳಿಸುವ ಸಂಸ್ಥೆಗಳಾಗದೆ, ಸ್ಥಳೀಯ ಅಗತ್ಯಗಳನ್ನು ಗುರುತಿಸಿ ಅಭಿವೃದ್ಧಿ ಕಾರ್ಯಗಳನ್ನು ರೂಪಿಸುವ ಶಕ್ತಿಯುತ ವ್ಯವಸ್ಥೆಗಳಾಗಬೇಕು ಎಂಬುದು ಅವರ ಆಶಯವಾಗಿತ್ತು. ಜನರ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಅಧಿಕಾರವನ್ನು ಜನರ ಸಮೀಪಕ್ಕೆ ತರುವ ಈ ಪ್ರಯತ್ನವು ಪ್ರಜಾಪ್ರಭುತ್ವದ ಅರ್ಥವನ್ನು ಮತ್ತಷ್ಟು ಗಟ್ಟಿಗೊಳಿಸಿತು. ಹೆಗಡೆಯವರ ಸಾಮಾಜಿಕ ಬದ್ಧತೆಯನ್ನು ಅರ್ಥಮಾಡಿಕೊಳ್ಳಬೇಕಾದರೆ ಅವರು ಸಮಾಜದ ವಿವಿಧ ವರ್ಗಗಳ ಬಗ್ಗೆ ಹೊಂದಿದ್ದ ಕಾಳಜಿಯನ್ನು ಗಮನಿಸಬೇಕು. ಬಡವರು, ರೈತರು, ಗ್ರಾಮೀಣ ಜನರು, ದುರ್ಬಲ ವರ್ಗಗಳು ಮತ್ತು ಅವಕಾಶಗಳಿಂದ ವಂಚಿತರಾದ ಜನರಿಗೆ ಸರ್ಕಾರದ ಯೋಜನೆಗಳು ತಲುಪಬೇಕು ಎಂಬುದು ಅವರ ಆಡಳಿತದ ಮೂಲಭಾವನೆಯಾಗಿತ್ತು. ಅಭಿವೃದ್ಧಿ ಎಂದರೆ ಕೇವಲ ನಗರಗಳ ರಸ್ತೆ, ಕಟ್ಟಡ ಮತ್ತು ಕೈಗಾರಿಕೆಗಳ ಬೆಳವಣಿಗೆಯಲ್ಲ; ಸಾಮಾನ್ಯ ಮನುಷ್ಯನ ಬದುಕಿನಲ್ಲಿ ಗುಣಾತ್ಮಕ ಬದಲಾವಣೆ ಉಂಟಾಗುವುದೇ ನಿಜವಾದ ಅಭಿವೃದ್ಧಿ ಎಂಬ ದೃಷ್ಟಿಕೋನ ಅವರಲ್ಲಿತ್ತು. ಸಮಾಜದಲ್ಲಿ ಜಾತಿ, ಧರ್ಮ, ಭಾಷೆ ಮತ್ತು ವರ್ಗಗಳ ಹೆಸರಿನಲ್ಲಿ ಉಂಟಾಗುವ ಅಂತರಗಳು ಪ್ರಜಾಪ್ರಭುತ್ವದ ಆರೋಗ್ಯಕ್ಕೆ ಹಾನಿಕಾರಕ. ಎಲ್ಲ ಸಮುದಾಯಗಳಿಗೂ ಸಮಾನ ಗೌರವ ಮತ್ತು ಅವಕಾಶ ದೊರೆಯಬೇಕು ಎಂಬುದು ಅವರ ಸಾರ್ವಜನಿಕ ಬದುಕಿನ ಪ್ರಮುಖ ಸಂದೇಶವಾಗಿತ್ತು. ಆದ್ದರಿಂದಲೇ ಅವರನ್ನು ಭಾವೈಕ್ಯತೆಯ ಪರವಾಗಿದ್ದ ನಾಯಕ ಎಂದು ನೆನಪಿಸಲಾಗುತ್ತದೆ. ಸಮಾಜದ ವೈವಿಧ್ಯತೆಯನ್ನು ವಿಭಜನೆಯ ಕಾರಣವನ್ನಾಗಿ ನೋಡದೆ, ಅದನ್ನು ಪ್ರಜಾಪ್ರಭುತ್ವದ ಶಕ್ತಿಯನ್ನಾಗಿ ಪರಿವರ್ತಿಸುವ ಅಗತ್ಯವನ್ನು ಅವರು ಒತ್ತಿಹೇಳುತ್ತಿದ್ದರು.



ರಾಮಕೃಷ್ಣ ಹೆಗಡೆಯವರ ರಾಜಕೀಯ ಶೈಲಿಯಲ್ಲಿದ್ದ ಮತ್ತೊಂದು ಗಮನಾರ್ಹ ಅಂಶವೆಂದರೆ ಅವರ ಸಂವಾದದ ಗುಣ. ರಾಜಕೀಯದಲ್ಲಿ ಭಿನ್ನಾಭಿಪ್ರಾಯಗಳು ಸಹಜ; ಆದರೆ ಭಿನ್ನಾಭಿಪ್ರಾಯವನ್ನು ವೈಮನಸ್ಸಾಗಿ ಪರಿವರ್ತಿಸಬಾರದು ಎಂಬ ಪ್ರಜಾಪ್ರಭುತ್ವದ ಮನೋಭಾವ ಅವರಲ್ಲಿ ಕಂಡುಬರುತ್ತಿತ್ತು. ವಿರೋಧ ಪಕ್ಷಗಳೊಂದಿಗೆ ಸಂವಾದ ನಡೆಸುವುದು, ವಿವಿಧ ಅಭಿಪ್ರಾಯಗಳಿಗೆ ಅವಕಾಶ ನೀಡುವುದು ಮತ್ತು ಸಾರ್ವಜನಿಕ ಚರ್ಚೆಯನ್ನು ಗೌರವಿಸುವುದು ಅವರ ರಾಜಕೀಯ ಸಂಸ್ಕೃತಿಯ ಭಾಗವಾಗಿತ್ತು. ರಾಜಕೀಯ ಎದುರಾಳಿಯನ್ನು ಶತ್ರುವೆಂದು ನೋಡುವ ಪ್ರವೃತ್ತಿಗೆ ಬದಲಾಗಿ, ವಿಚಾರಗಳ ಆಧಾರದ ಮೇಲೆ ಸಂಘರ್ಷ ನಡೆಸುವ ಸಂಸ್ಕೃತಿ ಅಗತ್ಯವೆಂದು ಅವರು ನಂಬಿದ್ದರು. ಆಡಳಿತದಲ್ಲಿ ಪಾರದರ್ಶಕತೆ ಮತ್ತು ಜವಾಬ್ದಾರಿತನವೂ ಅವರ ಚಿಂತನೆಯ ಪ್ರಮುಖ ಭಾಗವಾಗಿತ್ತು. ಸರ್ಕಾರದ ನಿರ್ಧಾರಗಳು ಜನರಿಗೆ ಅರ್ಥವಾಗಬೇಕು, ಸಾರ್ವಜನಿಕ ಸಂಪನ್ಮೂಲಗಳು ಜನರ ಹಿತಕ್ಕಾಗಿ ಬಳಸಲ್ಪಡಬೇಕು ಮತ್ತು ಆಡಳಿತ ವ್ಯವಸ್ಥೆ ಜನರ ವಿಶ್ವಾಸವನ್ನು ಗಳಿಸಬೇಕು ಎಂಬ ನಿಲುವು ಅವರಲ್ಲಿತ್ತು. ಅಧಿಕಾರವನ್ನು ವೈಯಕ್ತಿಕ ಪ್ರತಿಷ್ಠೆಯ ಸಾಧನವನ್ನಾಗಿ ಬಳಸದೆ, ಸಾರ್ವಜನಿಕ ಸೇವೆಯ ಅವಕಾಶವೆಂದು ನೋಡುವ ಮನೋಭಾವ ಅವರ ವ್ಯಕ್ತಿತ್ವದ ಪ್ರಮುಖ ಗುಣವಾಗಿತ್ತು.

ಹೆಗಡೆಯವರು ಕರ್ನಾಟಕದ ಅಭಿವೃದ್ಧಿಯನ್ನು ವಿಶಾಲ ದೃಷ್ಟಿಕೋನದಿಂದ ನೋಡಿದವರು. ಕೃಷಿ, ಗ್ರಾಮೀಣ ಅಭಿವೃದ್ಧಿ, ಶಿಕ್ಷಣ, ಕೈಗಾರಿಕೆ, ಮೂಲಸೌಕರ್ಯ ಮತ್ತು ಆಡಳಿತ ಸುಧಾರಣೆ?ಇವು ಪರಸ್ಪರ ಸಂಬಂಧ ಹೊಂದಿರುವ ಕ್ಷೇತ್ರಗಳು ಎಂಬ ಅರಿವು ಅವರಲ್ಲಿತ್ತು. ರೈತ ಸಮೃದ್ಧಿಯಾಗದೆ ಗ್ರಾಮೀಣ ಆರ್ಥಿಕತೆ ಬಲವಾಗುವುದಿಲ್ಲ; ಗ್ರಾಮೀಣ ಆರ್ಥಿಕತೆ ಬಲವಾಗದೆ ರಾಜ್ಯದ ಒಟ್ಟಾರೆ ಅಭಿವೃದ್ಧಿ ಸಾಧ್ಯವಿಲ್ಲ ಎಂಬ ವಾಸ್ತವವನ್ನು ಅವರು ಅರಿತುಕೊಂಡಿದ್ದರು. ಕರ್ನಾಟಕದ ರಾಜಕೀಯ ಮತ್ತು ಆಡಳಿತ ವ್ಯವಸ್ಥೆಯಲ್ಲಿ ತಂತ್ರಜ್ಞಾನ ಮತ್ತು ಆಧುನಿಕತೆಯ ಅಗತ್ಯವನ್ನು ಗುರುತಿಸಿದ ನಾಯಕರಲ್ಲಿಯೂ ಹೆಗಡೆಯವರ ಸ್ಥಾನ ಮಹತ್ವದ್ದಾಗಿದೆ. ಆಡಳಿತವು ಕಾಲದ ಬದಲಾವಣೆಗಳಿಗೆ ಹೊಂದಿಕೊಳ್ಳಬೇಕು, ಹೊಸ ತಂತ್ರಜ್ಞಾನವನ್ನು ಸಾರ್ವಜನಿಕ ಸೇವೆಯ ಸುಧಾರಣೆಗೆ ಬಳಸಬೇಕು ಎಂಬ ಚಿಂತನೆ ಅವರ ಕಾಲದಲ್ಲಿಯೇ ಕಾಣಿಸಿಕೊಂಡಿತ್ತು. ಇಂದಿನ ಡಿಜಿಟಲ್ ಆಡಳಿತದ ಯುಗದಲ್ಲಿ ನಾವು ಸಹಜವಾಗಿ ಕಾಣುತ್ತಿರುವ ಅನೇಕ ಆಲೋಚನೆಗಳ ಬೀಜಗಳನ್ನು ಹಿಂದಿನ ಆಡಳಿತ ಸುಧಾರಣೆಯ ಪ್ರಯತ್ನಗಳಲ್ಲಿ ಗುರುತಿಸಬಹುದು.

ರಾಷ್ಟ್ರೀಯ ರಾಜಕಾರಣದಲ್ಲಿಯೂ ರಾಮಕೃಷ್ಣ ಹೆಗಡೆಯವರು ತಮ್ಮದೇ ಆದ ಸ್ಥಾನವನ್ನು ನಿರ್ಮಿಸಿಕೊಂಡರು. ಕೇಂದ್ರ ರಾಜಕಾರಣದಲ್ಲಿ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದ ಅವರು ರಾಷ್ಟ್ರೀಯ ಮಟ್ಟದಲ್ಲಿ ರಾಜ್ಯಗಳ ಹಕ್ಕುಗಳು, ಆಡಳಿತ ಸುಧಾರಣೆ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳ ಪರವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಕರ್ನಾಟಕದ ಅನುಭವವನ್ನು ರಾಷ್ಟ್ರದ ರಾಜಕೀಯ ಚರ್ಚೆಯೊಂದಿಗೆ ಜೋಡಿಸುವ ಸಾಮರ್ಥ್ಯ ಅವರಲ್ಲಿತ್ತು. ಹೆಗಡೆಯವರ ವ್ಯಕ್ತಿತ್ವದ ಮತ್ತೊಂದು ಪ್ರಮುಖ ಅಂಶವೆಂದರೆ ಅವರ ಸರಳತೆ. ರಾಜಕೀಯ ಜೀವನದಲ್ಲಿ ಹುದ್ದೆಗಳು ಬರುತ್ತವೆ, ಹೋಗುತ್ತವೆ; ಆದರೆ ವ್ಯಕ್ತಿಯ ಮೌಲ್ಯಗಳು ಉಳಿಯುತ್ತವೆ ಎಂಬುದನ್ನು ಅವರ ಬದುಕು ತೋರಿಸುತ್ತದೆ. ಜನರೊಂದಿಗೆ ಆತ್ಮೀಯವಾಗಿ ಬೆರೆಯುವುದು, ಅವರ ಸಮಸ್ಯೆಗಳನ್ನು ಆಲಿಸುವುದು ಮತ್ತು ಸಾರ್ವಜನಿಕ ಜೀವನದಲ್ಲಿ ಸೌಜನ್ಯವನ್ನು ಕಾಪಾಡಿಕೊಳ್ಳುವುದು ಅವರ ವೈಶಿಷ್ಟ್ಯವಾಗಿತ್ತು. ಜನಪ್ರಿಯತೆ ಎಂದರೆ ಕೇವಲ ಘೋಷಣೆಗಳಿಂದ ಸಿಗುವುದಿಲ್ಲ; ಜನರ ಬದುಕಿನೊಂದಿಗೆ ನಿಜವಾದ ಸಂಬಂಧ ಬೆಳೆಸಿದಾಗ ಮಾತ್ರ ಅದು ಶಾಶ್ವತವಾಗುತ್ತದೆ ಎಂಬುದಕ್ಕೆ ಅವರ ಬದುಕು ಒಂದು ಉದಾಹರಣೆಯಾಗಿದೆ. ಇಂದಿನ ರಾಜಕೀಯ ಸಂದರ್ಭದಲ್ಲಿ ರಾಮಕೃಷ್ಣ ಹೆಗಡೆಯವರ ಚಿಂತನೆಗಳನ್ನು ಪುನಃ ನೆನಪಿಸಿಕೊಳ್ಳುವುದು ಅತ್ಯಂತ ಅಗತ್ಯವಾಗಿದೆ. ರಾಜಕೀಯದಲ್ಲಿ ಅಧಿಕಾರದ ಪೈಪೋಟಿ ಹೆಚ್ಚಾಗುತ್ತಿರುವಾಗ ಸಾರ್ವಜನಿಕ ಸೇವೆಯ ಮೂಲ ಉದ್ದೇಶ ಮರೆಯಾಗಬಾರದು. ಜಾತಿ, ಧರ್ಮ, ಪ್ರಾದೇಶಿಕತೆ ಮತ್ತು ವೈಯಕ್ತಿಕ ನಿಷ್ಠೆಗಳ ಆಧಾರದ ಮೇಲೆ ಸಮಾಜವನ್ನು ವಿಭಜಿಸುವ ಬದಲು ಅಭಿವೃದ್ಧಿ, ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಮಾನವೀಯತೆಯ ಆಧಾರದ ಮೇಲೆ ಜನರನ್ನು ಒಗ್ಗೂಡಿಸುವ ರಾಜಕೀಯ ಬೇಕಾಗಿದೆ.

ಇಂದಿನ ಯುವ ಪೀಳಿಗೆಗೆ ಹೆಗಡೆಯವರ ಜೀವನವು ಒಂದು ಮಹತ್ವದ ಪಾಠವನ್ನು ನೀಡುತ್ತದೆ. ರಾಜಕೀಯ ಎಂದರೆ ಕೇವಲ ಚುನಾವಣೆ ಗೆಲ್ಲುವುದು ಅಥವಾ ಅಧಿಕಾರ ಪಡೆಯುವುದು ಅಲ್ಲ. ಸಮಾಜವನ್ನು ಅರ್ಥಮಾಡಿಕೊಳ್ಳುವುದು, ಜನರ ನೋವಿಗೆ ಸ್ಪಂದಿಸುವುದು, ಆಡಳಿತದಲ್ಲಿ ಸುಧಾರಣೆ ತರುವುದು ಮತ್ತು ಮುಂದಿನ ಪೀಳಿಗೆಗೆ ಉತ್ತಮ ಸಮಾಜವನ್ನು ನಿರ್ಮಿಸುವುದು ರಾಜಕೀಯದ ನಿಜವಾದ ಅರ್ಥ. ಜನಪ್ರತಿನಿಧಿಗಳು ಜನರ ಸೇವಕರಾಗಬೇಕು, ಅಧಿಕಾರದ ಮಾಲೀಕರಾಗಬಾರದು ಎಂಬ ಪ್ರಜಾಪ್ರಭುತ್ವದ ತತ್ವವನ್ನು ಅವರ ಸಾರ್ವಜನಿಕ ಬದುಕಿನಿಂದ ಕಲಿಯಬಹುದು. ರಾಮಕೃಷ್ಣ ಹೆಗಡೆಯವರ ಕೊಡುಗೆಯನು ಮೌಲ್ಯಮಾಪನ ಮಾಡುವಾಗ ಅವರ ಕಾಲದ ಸಾಮಾಜಿಕ, ರಾಜಕೀಯ ಮತ್ತು ಆಡಳಿತಾತ್ಮಕ ಪರಿಸ್ಥಿತಿಯನ್ನು ಗಮನಿಸುವುದು ಅಗತ್ಯ. ಯಾವುದೇ ನಾಯಕನ ಬದುಕಿನಲ್ಲಿ ಸಾಧನೆಗಳ ಜೊತೆಗೆ ಮಿತಿಗಳೂ ಇರಬಹುದು. ಆದರೆ ಅವರ ಸಾರ್ವಜನಿಕ ಜೀವನದ ಕೇಂದ್ರದಲ್ಲಿ ಜನರು, ಪ್ರಜಾಪ್ರಭುತ್ವ ಮತ್ತು ಆಡಳಿತ ಸುಧಾರಣೆಯ ಪ್ರಶ್ನೆಗಳು ಇದ್ದವು ಎಂಬುದನ್ನು ನಿರಾಕರಿಸಲಾಗದು. ಅದಕ್ಕಾಗಿಯೇ ಅವರ ರಾಜಕೀಯ ಪರಂಪರೆ ಇಂದಿಗೂ ಚರ್ಚೆಗೆ ಒಳಗಾಗುತ್ತದೆ.

ಒಬ್ಬ ನಾಯಕನ ನಿಜವಾದ ಯಶಸ್ಸು ಅವರು ಅಧಿಕಾರದಲ್ಲಿದ್ದ ಅವಧಿಯಿಂದ ಮಾತ್ರ ನಿರ್ಧಾರವಾಗುವುದಿಲ್ಲ; ಅವರು ಬಿಟ್ಟುಹೋಗುವ ಚಿಂತನೆಗಳು ಸಮಾಜದ ಮೇಲೆ ಎಷ್ಟು ಕಾಲ ಪ್ರಭಾವ ಬೀರುತ್ತವೆ ಎಂಬುದರಿಂದ ನಿರ್ಧಾರವಾಗುತ್ತದೆ. ಆ ದೃಷ್ಟಿಯಿಂದ ರಾಮಕೃಷ್ಣ ಹೆಗಡೆಯವರು ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ವಿಶಿಷ್ಟ ಸ್ಥಾನ ಪಡೆದಿದ್ದಾರೆ. ವಿಕೇಂದ್ರೀಕರಣ, ಜನಪರ ಆಡಳಿತ, ಗ್ರಾಮೀಣ ಅಭಿವೃದ್ಧಿ, ಸಾಮಾಜಿಕ ಸಾಮರಸ್ಯ, ಪ್ರಜಾಪ್ರಭುತ್ವದ ಮೌಲ್ಯಗಳು ಮತ್ತು ಸಾರ್ವಜನಿಕ ಬದುಕಿನ ಸೌಜನ್ಯ?ಇವುಗಳ ಬಗ್ಗೆ ಅವರು ಬಿತ್ತಿದ ಚಿಂತನೆಗಳು ಇಂದಿಗೂ ಪ್ರಸ್ತುತವಾಗಿವೆ. ಲಿಂಗೈಕ್ಯ ರಾಮಕೃಷ್ಣ ಹೆಗಡೆಯವರನ್ನು ಸ್ಮರಿಸುವುದು ಕೇವಲ ಅವರ ಜಯಂತಿ ಅಥವಾ ಪುಣ್ಯತಿಥಿಯಂದು ಹೂಮಾಲೆ ಹಾಕಿ ಗೌರವ ಸಲ್ಲಿಸುವುದಕ್ಕೆ ಸೀಮಿತವಾಗಬಾರದು. ಅವರ ಬದುಕಿನಿಂದ ಜನಪರ ರಾಜಕಾರಣದ ಅರ್ಥವನ್ನು ಅರಿತುಕೊಳ್ಳಬೇಕು. ಅಧಿಕಾರವು ಜನರಿಗಾಗಿ ಎಂಬ ಅರಿವು ಪ್ರತಿಯೊಬ್ಬ ಜನಪ್ರತಿನಿಧಿಯಲ್ಲೂ ಮೂಡಬೇಕು. ಗ್ರಾಮೀಣ ಜನರ ಧ್ವನಿ ಆಡಳಿತದ ಕೇಂದ್ರಕ್ಕೆ ತಲುಪಬೇಕು. ಅಭಿವೃದ್ಧಿಯ ಫಲ ಕಟ್ಟಕಡೆಯ ವ್ಯಕ್ತಿಗೂ ತಲುಪಬೇಕು. ಸಾಮಾಜಿಕ ಭಿನ್ನತೆಗಳು ಮಾನವೀಯತೆಯನ್ನು ಮೀರಬಾರದು. ಪ್ರಜಾಪ್ರಭುತ್ವವು ಕೇವಲ ಮತದಾನದ ದಿನದ ಆಚರಣೆಯಾಗದೆ, ಪ್ರತಿದಿನದ ಆಡಳಿತ ಸಂಸ್ಕೃತಿಯಾಗಬೇಕು.

ಜನರೊಂದಿಗೆ ಬದುಕಿದ, ಜನರ ಸಮಸ್ಯೆಗಳನ್ನು ಅರ್ಥಮಾಡಿಕೊಂಡ, ಆಡಳಿತಕ್ಕೆ ಹೊಸ ಆಯಾಮ ನೀಡಲು ಪ್ರಯತ್ನಿಸಿದ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಸಾರ್ವಜನಿಕ ಜೀವನದಲ್ಲಿ ಪ್ರತಿಷ್ಠಾಪಿಸಲು ಶ್ರಮಿಸಿದ ಜನನಾಯಕ ರಾಮಕೃಷ್ಣ ಹೆಗಡೆಯವರ ಸ್ಮರಣೆ ನಮ್ಮ ಸಮಾಜಕ್ಕೆ ಸದಾ ಪ್ರೇರಣೆಯಾಗಿರಲಿ. ಅವರ ಸಾಮಾಜಿಕ ಬದ್ಧತೆ, ಅಭಿವೃದ್ಧಿಯ ದೂರದೃಷ್ಟಿ, ಭಾವೈಕ್ಯತೆಯ ಆಶಯ ಮತ್ತು ಜನಪರ ಆಡಳಿತದ ಚಿಂತನೆಗಳು ಮುಂದಿನ ಪೀಳಿಗೆಗಳಿಗೂ ದಾರಿದೀಪವಾಗಲಿ. ಅಧಿಕಾರದ ರಾಜಕಾರಣಕ್ಕಿಂತ ಸೇವೆಯ ರಾಜಕಾರಣವೇ ಶ್ರೇಷ್ಠ ಎಂಬ ಸಂದೇಶವನ್ನು ಅವರ ಬದುಕು ನಮಗೆ ನೆನಪಿಸುತ್ತಲೇ ಇರಲಿ.

ಸಂಗಮೇಶ ಎನ್ ಜವಾದಿ,
ಬರಹಗಾರರು, ಪರಿಸರ ಸಂರಕ್ಷಕರು,
ಹೋರಾಟಗಾರರು, ಬೀದರ್ ಜಿಲ್ಲೆ.



ಈ ನಮ್ಮ ಧೃತಿ ನ್ಯೂಸ್

E NAMMA DHURTHI NEWS
KANNADA DAILY NEWS PAPER

## ರಕ್ಷಾಬಂಧನಕ್ಕೆ ಶುಭ ಕೋರಿದ ರಾಷ್ಟ್ರಪತಿ ಮುರ್ಮು, ಪ್ರಧಾನಿ ಮೋದಿ



ನವದೆಹಲಿ: ಸಹೋದರ-ಸಹೋದರಿಯರ ನಡುವಿನ ಪವಿತ್ರ ಪ್ರೀತಿ ಮತ್ತು ಬಾಂಧವ್ಯದ ಸಂಕೇತವಾದ ರಕ್ಷಾಬಂಧನದ ಅಂಗವಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಜನತೆಗೆ ಶುಭಾಶಯಗಳನ್ನು ಕೋರಿದ್ದಾರೆ.

ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಶುಭಾಶಯ ಸಂದೇಶ ಹಂಚಿಕೊಂಡಿರುವ ಪ್ರಧಾನಿ ಮೋದಿ, 'ರಕ್ಷಾಬಂಧನದ ಈ ಪವಿತ್ರ ಸಂದರ್ಭದಲ್ಲಿ ಎಲ್ಲರಿಗೂ ಹೃತ್ಪೂರ್ವಕ ಶುಭಾಶಯಗಳು. ಈ ಪಾವನ ಹಬ್ಬವು ನಿಮ್ಮೆಲ್ಲರ ಜೀವನದಲ್ಲಿ ಸುಖ, ಸಮೃದ್ಧಿ ಮತ್ತು ಯಶಸ್ಸನ್ನು ತರಲಿ' ಎಂದು ಹಾರೈಸಿದ್ದಾರೆ. ಸಹೋದರ-ಸಹೋದರಿಯರ ನಡುವಿನ ವಾತ್ಸಲ್ಯ, ಪರಸ್ಪರ ನಂಬಿಕೆ ಹಾಗೂ ಪ್ರೀತಿಯ ಪವಿತ್ರ ಬಾಂಧವ್ಯ ಸದಾ ಅಚಲವಾಗಿ, ಎಂದಿಗೂ ಮುರಿಯದಂತೆ ಶಾಶ್ವತವಾಗಿ ಉಳಿಯಲಿ ಎಂದು ಅವರು ಆಶಿಸಿದ್ದಾರೆ. ರಾಜಕೀಯ ಸುದ್ದಿ ಮತ್ತು ವಿಶ್ಲೇಷಣೆಗಳನ್ನು ಓದುವುದು ಭೌಗೋಳಿಕ ನಕ್ಷೆಗಳು ಮತ್ತು ವಿವರಗಳನ್ನು ಅನ್ವೇಷಿಸುವುದು ಪ್ರತಿ ವರ್ಷದಂತೆ ಈ ಬಾರಿಯೂ ಪ್ರಧಾನಿ ಮೋದಿ ಅವರ ಅಧಿಕೃತ ನಿವಾಸದಲ್ಲಿ ವಿವಿಧ ಶಾಲೆಗಳ ವಿದ್ಯಾರ್ಥಿನಿಯರು ಸೇರಿದಂತೆ ಸಾರ್ವಜನಿಕರು ಪ್ರಧಾನಿಗೆ ರಾಖಿ ಕಟ್ಟಿ ರಕ್ಷಾಬಂಧನವನ್ನು ಸಂಭ್ರಮದಿಂದ ಆಚರಿಸಿದರು. ದೇಶದ ಗಡಿ ಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಭಾರತೀಯ ಸೇನೆ ಹಾಗೂ ಭದ್ರತಾ ಪಡೆಗಳ ಯೋಧರಿಗೂ ದೇಶಾದ್ಯಂತ ಮಹಿಳೆಯರು ಮತ್ತು ಮಕ್ಕಳು ಪ್ರೀತಿಯಿಂದ ರಾಖಿ ಕಳುಹಿಸುವ ಮೂಲಕ ರಕ್ಷಾಬಂಧನದ ಶುಭಾಶಯಗಳನ್ನು ತಿಳಿಸಿದ್ದಾರೆ. ರಕ್ಷಾಬಂಧನ ಕೇವಲ ರಾಖಿ ಕಟ್ಟುವ ಹಬ್ಬವಲ್ಲ. ಇದು ಮಹಿಳೆಯರ ಗೌರವ, ಸುರಕ್ಷತೆ ಹಾಗೂ ನಾರಿ ಶಕ್ತಿಯ ಸಬಲೀಕರಣದ ಸಂಕಲ್ಪವನ್ನು ಮತ್ತಷ್ಟು ಬಲಪಡಿಸುವ ಸಂದರ್ಭವಾಗಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಸೇರಿದಂತೆ ಗಣ್ಯರು ಶುಭ ಹಾರೈಸಿದ್ದಾರೆ.

## ಮುಡಾ ನಿವೇಶನ ಪಡೆದವರಿಗೆ ಶುರುವಾಯ್ತು ಆತಂಕ

ಮೈಸೂರು: ಅರಮನೆ ನಗರಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) 50:50 ಅನುಪಾತದ ನಿವೇಶನಗಳ ಅಕ್ರಮ ಹಂಚಿಕೆ ಪ್ರಕರಣ ಇದೀಗ ಮತ್ತೊಂದು ಹಂತಕ್ಕೆ ತಲುಪಿದ್ದು, ನಿವೇಶನ ಪಡೆದವರು, ಮಾರಾಟ ಮಾಡಿದವರು ಹಾಗೂ ಖರೀದಿಸಿದವರಲ್ಲಿ ಆತಂಕ ಹೆಚ್ಚಾಗಿದೆ.




ಅಕ್ರಮವಾಗಿ ಮಂಜೂರಾಗಿರುವ ಬದಲಿ ಹಾಗೂ ಪ್ರೋತ್ಸಾಹದಾಯಕ ನಿವೇಶನಗಳನ್ನು ವಾಪಸ್ ಪಡೆಯುವ ಪ್ರಕ್ರಿಯೆಗೆ ಮುಡಾ ಚಾಲನೆ ನೀಡಿದೆ. ಪ್ರಭಾರ ಆಯುಕ್ತ ಬಿ.ಆರ್. ಮಹೇಶ್ ನೇತೃತ್ವದಲ್ಲಿ ಅಧಿಕಾರಿಗಳು ದಾಖಲೆಗಳ ಪರಿಶೀಲನೆ ಹಾಗೂ ಮಾಹಿತಿ ಸಂಗ್ರಹ ಕಾರ್ಯವನ್ನು ತ್ವರಿತಗೊಳಿಸಿದ್ದಾರೆ. ಮುಡಾದಿಂದ ಈವರೆಗೆ ಮಂಜೂರಾಗಿರುವ ನಿವೇಶನಗಳ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ. ಈ ಸಂಬಂಧ ಸಂಬಂಧಪಟ್ಟ ಸಬ್ ರಿಜಿಸ್ಟ್ರಾರ್ ಕಚೇರಿಗಳಿಗೆ ಮೂರು ದಿನಗಳೊಳಗಾಗಿ ಅಗತ್ಯ ದಾಖಲೆಗಳು ಹಾಗೂ ಮಾಹಿತಿಯನ್ನು ಒದಗಿಸುವಂತೆ ಗಡುವು ನೀಡಲಾಗಿದೆ.ನಿವೇಶನ ಹಂಚಿಕೆಗೆ ಸಂಬಂಧಿಸಿದ ಮೂಲ ದಾಖಲೆಗಳು ಹಾಗೂ ನೋಂದಣಿ ದಾಖಲೆಗಳನ್ನು ಪರಸ್ಪರ ತಾಳೆ ಮಾಡುವ ಮೂಲಕ ಅಕ್ರಮ ಮಂಜೂರಾತಿಗಳನ್ನು ಪತ್ತೆಹಚ್ಚಲು ಕ್ರಮ ಕೈಗೊಳ್ಳಲಾಗುತ್ತಿದೆ. ಮುಡಾದಿಂದ ನಿವೇಶನ ಪಡೆದ ಬಳಿಕ ಅವುಗಳನ್ನು ಮಾರಾಟ ಮಾಡಲಾಗಿದೆಯೇ, ಮರುಮಾರಾಟವಾಗಿದೆಯೇ ಎಂಬುದನ್ನು ಎನ್‌ಕಂಬರೆನ್ಸ್ ಸರ್ಟಿಫಿಕೇಟ್ (ಇಸಿ) ಮೂಲಕ ಪತ್ತೆಹಚ್ಚುವ ಕಾರ್ಯವೂ ನಡೆಯುತ್ತಿದೆ. ಹೀಗಾಗಿ ನಿವೇಶನ ಪಡೆದವರಷ್ಟೇ ಅಲ್ಲದೆ, ಮಾರಾಟ ಮಾಡಿದವರು ಹಾಗೂ ಖರೀದಿಸಿದವರ ಮೇಲೂ ಅಧಿಕಾರಿಗಳ ಪರಿಶೀಲನೆ ಮುಂದುವರಿದಿದೆ. ಈಗಾಗಲೇ ಕೆಲವು ನಿವೇಶನಗಳಲ್ಲಿ ಮನೆ ಹಾಗೂ ಇತರ ಕಟ್ಟಡಗಳು ನಿರ್ಮಾಣವಾಗಿರುವ ಹಿನ್ನೆಲೆಯಲ್ಲಿ, ಅಂತಹ ನಿವೇಶನಗಳನ್ನು ವಾಪಸ್ ಪಡೆಯುವ ಸಂದರ್ಭದಲ್ಲಿ ಎದುರಾಗಬಹುದಾದ ಕಾನೂನು ತೊಡಕುಗಳ ಕುರಿತು ಮುಡಾ ಕಾನೂನು ತಜ್ಞರ ಸಲಹೆ ಪಡೆಯಲು ಮುಂದಾಗಿದೆ. ನಿವೇಶನ ರದ್ದುಪಡಿಸುವಿಕೆ ಹಾಗೂ ವಾಪಸ್ ಪಡೆಯುವ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕೆಲವು ತಾಂತ್ರಿಕ ಮತ್ತು ಆಡಳಿತಾತ್ಮಕ ಸ್ಪಷ್ಟನೆಗಳನ್ನು ನೀಡುವಂತೆ ಸರ್ಕಾರಕ್ಕೆ ಮುಡಾದಿಂದ ಪತ್ರ ಬರೆಯಲಾಗಿದೆ. ಸರ್ಕಾರದಿಂದ ಸ್ಪಷ್ಟನೆ ದೊರೆತ ಬಳಿಕ ಮುಂದಿನ ಕ್ರಮ ಮತ್ತಷ್ಟು ವೇಗ ಪಡೆಯುವ ಸಾಧ್ಯತೆಯಿದೆ. ಯಾವ ನಿವೇಶನ ಅಕ್ರಮವಾಗಿ ಮಂಜೂರಾಗಿದೆ, ಯಾರ ಹೆಸರಿಗೆ ಹಂಚಿಕೆಯಾಗಿದೆ, ನಂತರ ಯಾರಿಗೆ ಮಾರಾಟವಾಗಿದೆ ಹಾಗೂ ಪ್ರಸ್ತುತ ಯಾರ ಹೆಸರಿನಲ್ಲಿದೆ ಎಂಬುದನ್ನು ದಾಖಲೆಗಳ ಆಧಾರದ ಮೇಲೆ ಸಂಪೂರ್ಣವಾಗಿ ಪರಿಶೀಲಿಸಲಾಗುತ್ತಿದೆ. ಮುಡಾದ ಈ ಪರಿಶೀಲನಾ ಕಾರ್ಯದಿಂದ 50:50 ಅನುಪಾತದಡಿ ನಿವೇಶನ ಪಡೆದವರಲ್ಲಿ ಆತಂಕ ಹೆಚ್ಚಾಗಿದೆ.

# ನೇಪಾಳ ಪ್ರವಾಹ : ಸಾವಿನ ಸಂಖ್ಯೆ 469ಕ್ಕೆ ಏರಿಕೆ ; ರಕ್ಷಣಾ ಕಾರ್ಯಾಚರಣೆ ಮುಂದುವರಿಕೆ

ಕಠ್ಮಂಡು: ನೇಪಾಳದಲ್ಲಿ ಸಂಭವಿಸಿದ ಭೀಕರ ಹಠಾತ್ ಪ್ರವಾಹ ಹಾಗೂ ಭೂಕುಸಿತದಲ್ಲಿ ಮೃತಪಟ್ಟವರ ಸಂಖ್ಯೆ 469ಕ್ಕೆ ಏರಿಕೆಯಾಗಿದೆ. ರಕ್ಷಣಾ ಹಾಗೂ ಪರಿಹಾರ ಕಾರ್ಯಾಚರಣೆಗಳು ಭರದಿಂದ ಮುಂದುವರಿದಿದ್ದು, ನಾಪತ್ತೆಯಾದವರಿಗಾಗಿ ನದಿಯ ಕೆಳಹರಿವಿನ ಪ್ರದೇಶಗಳಲ್ಲೂ ಶೋಧ ಕಾರ್ಯ ವಿಸ್ತರಿಸಲಾಗಿದೆ.

ನೇಪಾಳದ ರಾಸುವಾ ಜಿಲ್ಲೆಯಲ್ಲಿ ಆ.26ರಂದು ಸಂಭವಿಸಿದ ಭಾರಿ ಪ್ರವಾಹದ ಪರಿಣಾಮ ಭೋಟೆಕೋಶಿ ಮತ್ತು ತ್ರಿಶೂಲಿ ನದಿ ವ್ಯವಸ್ಥೆಗಳ ಉದ್ದಕ್ಕೂ ಭಾರಿ ಹಾನಿಯಾಗಿದೆ. ಮನೆಗಳು, ರಸ್ತೆಗಳು, ಸೇತುವೆಗಳು, ಜಲವಿದ್ಯುತ್ ಯೋಜನೆಗಳು ಹಾಗೂ ಇತರ ಮೂಲಸೌಕರ್ಯಗಳು ಕೊಚ್ಚಿಹೋಗಿವೆ. ಇದುವರೆಗೆ 1,545 ಮಂದಿಯನ್ನು ರಕ್ಷಿಸಲಾಗಿದ್ದು, ಅವರ ಪೈಕಿ 84 ಮಂದಿ ಕಠ್ಮಂಡುವಿನ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಪ್ರವಾಹದಿಂದ ಹಾನಿಗೊಳಗಾದ ರಸ್ತೆಗಳು ಮತ್ತು ಸೇತುವೆಗಳ ಕಾರಣ ಹಲವು ಪ್ರದೇಶಗಳಿಗೆ ಭೂಮಾರ್ಗದ ಸಂಪರ್ಕ ಇನ್ನೂ ಕಷ್ಟಕರವಾಗಿದೆ. ನದಿಯೊಂದಿಗೆ ಭಾರಿ ಪ್ರಮಾಣದ ಕಲ್ಲು, ಮಣ್ಣು, ಹಿಮ ಹಾಗೂ ಇತರ ಅವಶೇಷಗಳು ಕೆಳಭಾಗಕ್ಕೆ ಕೊಚ್ಚಿಕೊಂಡು ಬಂದಿರುವುದರಿಂದ ರಕ್ಷಣಾ ಕಾರ್ಯಾಚರಣೆ ಮತ್ತಷ್ಟು ಸವಾಲಿನದ್ದಾಗಿದೆ.

**288 ಭಾರತೀಯರು ಸಂಪರ್ಕಕ್ಕೆ ಸಿಗದೆ ಆತಂಕ**

ದುರಂತದ ಹಿನ್ನೆಲೆಯಲ್ಲಿ ಭಾರತೀಯ ಪ್ರಜೆಗಳ ಸುರಕ್ಷತೆಯ ಬಗ್ಗೆಯೂ



ಆತಂಕ ಹೆಚ್ಚಾಗಿದೆ. ಭಾರತದ ವಿದೇಶಾಂಗ ಸಚಿವಾಲಯದ ಪ್ರಕಾರ, 288 ಭಾರತೀಯ ಪ್ರಜೆಗಳು ಇನ್ನೂ ಸಂಪರ್ಕಕ್ಕೆ ಸಿಕ್ಕಿಲ್ಲ. ಇವರಲ್ಲಿ ನೇಪಾಳದ ವಿದ್ಯುತ್ ಯೋಜನೆಯಲ್ಲಿ ಕೆಲಸ ಮಾಡುತ್ತಿದ್ದ 73 ಮಂದಿ ಸೇರಿದ್ದಾರೆ. ಕಾಣೆಯಾದ ಭಾರತೀಯರನ್ನು ಪತ್ತೆಹಚ್ಚಲು ಭಾರತ ಮತ್ತು ನೇಪಾಳದ ಅಧಿಕಾರಿಗಳು ಪರಸ್ಪರ ಸಮನ್ವಯದೊಂದಿಗೆ ಕಾರ್ಯನಿರ್ವಹಿಸುತ್ತಿದ್ದಾರೆ. ರಕ್ಷಣಾ ಕಾರ್ಯಾಚರಣೆ ಮುಂದುವರಿದಿರುವ ಹಿನ್ನೆಲೆಯಲ್ಲಿ ನಾಪತ್ತೆಯಾದವರ ಸಂಖ್ಯೆಯಲ್ಲಿ ಬದಲಾವಣೆಯಾಗುವ ಸಾಧ್ಯತೆಯಿದೆ. ಸಂಪರ್ಕ ಕಡಿತಗೊಂಡಿರುವುದು ಎಲ್ಲರೂ ಮೃತಪಟ್ಟಿದ್ದಾರೆ ಎಂಬುದನ್ನು ಸೂಚಿಸುವುದಿಲ್ಲ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

**ಹಿಮನದಿ ಕುಸಿತವೇ ಪ್ರಮುಖ ಕಾರಣ**

ಆರಂಭದಲ್ಲಿ ಭೂಕಂಪದಿಂದ ಈ ದುರಂತ ಸಂಭವಿಸಿರಬಹುದು ಎಂಬ ಶಂಕೆ ವ್ಯಕ್ತವಾಗಿದ್ದರೂ, ಉಪಗ್ರಹ ಚಿತ್ರಗಳ ಪ್ರಾಥಮಿಕ ವಿಶ್ಲೇಷಣೆ ಹಾಗೂ ಭೂವೈಜ್ಞಾನಿಕ ಅಧ್ಯಯನಗಳು ಹಿಮನದಿ ಕುಸಿತ ಮತ್ತು ಬಂಡೆ-ಹಿಮದ ಅವಶೇಷಗಳ ಭಾರಿ ಕುಸಿತವೇ ಹಠಾತ್ ಪ್ರವಾಹಕ್ಕೆ ಪ್ರಮುಖ ಕಾರಣವಾಗಿರಬಹುದು ಎಂದು ಸೂಚಿಸಿವೆ. ಅಮೆರಿಕದ ಭೂವೈಜ್ಞಾನಿಕ ಸಮೀಕ್ಷೆ ಹಾಗೂ ಇತರ ವೈಜ್ಞಾನಿಕ ವಿಶ್ಲೇಷಣೆಗಳ ಪ್ರಕಾರ, ಲಾಂಗ್‌ಟಾಂಗ್ ಪ್ರದೇಶದ ಸಮೀಪ ಹಿಮನದಿ ಹಾಗೂ ಅದರ ಕೆಳಭಾಗದ ಬಂಡೆಗಳ ಕುಸಿತದಿಂದ ಭಾರಿ ಪ್ರಮಾಣದ ಕಲ್ಲು, ಹಿಮ ಮತ್ತು ಮಣ್ಣು ನದಿಗೆ ಸೇರಿ ಬೃಹತ್ ಪ್ರವಾಹ ಉಂಟಾಗಿದೆ. ಈ ಪ್ರವಾಹವು ಭೋಟೆಕೋಶಿ ಹಾಗೂ ತ್ರಿಶೂಲಿ ನದಿ ವ್ಯವಸ್ಥೆಗಳ ಮೂಲಕ ಕೆಳಭಾಗಕ್ಕೆ ಹರಿದು ಹಲವು ಜನವಸತಿ ಪ್ರದೇಶಗಳು ಮತ್ತು ಮೂಲಸೌಕರ್ಯಗಳಿಗೆ ಹಾನಿ ಮಾಡಿದೆ.

**ಹವಾಮಾನ ಬದಲಾವಣೆಯೂ ಅಪಾಯ ಹೆಚ್ಚಿಸುತ್ತಿದೆ** ಈ ನಿರ್ದಿಷ್ಟ ದುರಂತಕ್ಕೆ ಹವಾಮಾನ ಬದಲಾವಣೆಯೇ ನೇರ ಕಾರಣ ಎಂದು ಅಂತಿಮವಾಗಿ ಹೇಳಲು ಇನ್ನಷ್ಟು ವೈಜ್ಞಾನಿಕ ಅಧ್ಯಯನ ಅಗತ್ಯವಿದೆ. ಆದರೆ ಹಿಮಾಲಯದಲ್ಲಿ ತಾಪಮಾನ ಏರಿಕೆಯಿಂದ ಹಿಮನದಿಗಳ ಹಿಂಜರಿತ, ಹಿಮನದಿ ಸರೋವರಗಳ ವಿಸ್ತರಣೆ ಹಾಗೂ ಪರ್ವತ ಇಳಿಜಾರುಗಳ ಅಸ್ಥಿರತೆ ಹೆಚ್ಚುತ್ತಿರುವುದು ಇಂತಹ ದುರಂತಗಳ ಅಪಾಯವನ್ನು ಹೆಚ್ಚಿಸಬಹುದು ಎಂದು ತಜ್ಞರು ಎಚ್ಚರಿಸಿದ್ದಾರೆ. ಪ್ರವಾಹದ ಅವಶೇಷಗಳಿಂದ ನದಿಗಳಲ್ಲಿ ಹೊಸ ಜಲಾಶಯಗಳು ರೂಪುಗೊಂಡಿರುವ ಹಿನ್ನೆಲೆಯಲ್ಲಿ ಕೆಳಭಾಗದ ಪ್ರದೇಶಗಳಿಗೆ ಮತ್ತಷ್ಟು ಪ್ರವಾಹದ ಅಪಾಯವಿದೆ. ಹೀಗಾಗಿ ನದಿಪಾತ್ರದ ಜನರು ಎಚ್ಚರಿಕೆಯಿಂದ ಇರುವಂತೆ ಅಧಿಕಾರಿಗಳು ಸೂಚಿಸಿದ್ದು, ರಕ್ಷಣಾ ತಂಡಗಳನ್ನು ಹೈ ಅಲರ್ಟ್‌ನಲ್ಲಿ ಇರಿಸಲಾಗಿದೆ.

ನೇಪಾಳದ ಹಲವು ಜಿಲ್ಲೆಗಳಲ್ಲಿ ರಕ್ಷಣಾ ಸಿಬ್ಬಂದಿ ನಾಪತ್ತೆಯಾದವರಿಗಾಗಿ ಶೋಧ ಮುಂದುವರಿಸಿದ್ದಾರೆ. ನದಿಯ ಕೆಳಹರಿವಿನ ಪ್ರದೇಶಗಳಲ್ಲಿ ಮೃತದೇಹಗಳು ಪತ್ತೆಯಾಗುತ್ತಿರುವ ಹಿನ್ನೆಲೆಯಲ್ಲಿ ಶೋಧ ಕಾರ್ಯಾಚರಣೆಯ ವ್ಯಾಪ್ತಿಯನ್ನೂ ವಿಸ್ತರಿಸಲಾಗಿದೆ.

# ಹೊಸ ರೈಲ್ವೆ ಯೋಜನೆಗಳಲ್ಲಿ ಕೇಂದ್ರದಿಂದ ಮಲತಾಯಿ ಧೋರಣೆ: ಎಂ.ಬಿ.ಪಾಟೀಲ್ ಆರೋಪ

ಬೆಂಗಳೂರು: ಕೇಂದ್ರ ರೈಲ್ವೆ ಇಲಾಖೆ ಘೋಷಿಸಿರುವ ಹೊಸ ಯೋಜನೆಗಳಲ್ಲಿ ಕರ್ನಾಟಕಕ್ಕೆ ಸೂಕ್ತ ಆದ್ಯತೆ ನೀಡದೆ ಮಲತಾಯಿ ಧೋರಣೆ ಅನುಸರಿಸಲಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಆರೋಪಿಸಿದ್ದಾರೆ.

ತಮ್ಮ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಏಳು ರೈಲ್ವೆ ಮಾರ್ಗಗಳ ಯೋಜನೆಗಳನ್ನು ಘೋಷಿಸಿದ್ದು, ಇದರಲ್ಲಿ ನಾಲ್ಕು ಹೊಸ ಚತುಷ್ಪಥ ರೈಲು ಮಾರ್ಗಗಳೂ ಸೇರಿವೆ. ದೆಹಲಿ, ಮುಂಬೈ, ಚೆನ್ನೈ ಹಾಗೂ ಗೋವಾ ಸೇರಿದಂತೆ ವಿವಿಧ ನಗರಗಳನ್ನು ಸಂಪರ್ಕಿಸುವ ಯೋಜನೆಗಳಿಗೆ ಆದ್ಯತೆ ನೀಡಲಾಗಿದೆ. ಆದರೆ, ಈ ಯೋಜನೆಗಳಲ್ಲಿ ಕರ್ನಾಟಕಕ್ಕೆ ಸೂಕ್ತ ಪ್ರಾತಿನಿಧ್ಯ ದೊರೆತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕರ್ನಾಟಕದಲ್ಲಿ ಪ್ರಮುಖ ರೈಲ್ವೆ ಮಾರ್ಗವೊಂದು ಹಾದುಹೋಗದ ರೀತಿಯಲ್ಲಿ ಯೋಜನೆ ರೂಪಿಸಿರುವುದು ಸರಿಯಲ್ಲ. ರಾಜ್ಯಕ್ಕೆ ನಿರಂತರವಾಗಿ ಮಲತಾಯಿ ಧೋರಣೆ ತೋರುತ್ತಿರುವುದು ಅನ್ಯಾಯ ಎಂದು ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕದಿಂದ 10ಕ್ಕೂ ಹೆಚ್ಚು ಬಿಜೆಪಿ ಸಂಸದರು ಹಾಗೂ ರೈಲ್ವೆ ಖಾತೆಯ ರಾಜ್ಯ ಸಚಿವ ವಿ. ಸೋಮಣ್ಣ ಅವರಿದ್ದರೂ ರಾಜ್ಯದ ರೈಲ್ವೆ ಯೋಜನೆಗಳಿಗೆ ನಿರೀಕ್ಷಿತ ಆದ್ಯತೆ ದೊರೆಯುತ್ತಿಲ್ಲ. ಈ ಸಮಸ್ಯೆಯನ್ನು ರಾಜ್ಯದ ರೈಲ್ವೆ ಸಚಿವರು ಹೇಗೆ ಬಗೆಹರಿಸುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ ಎಂದರು. ಬೆಂಗಳೂರು-ಹುಬ್ಬಳ್ಳಿ, ಬೆಂಗಳೂರು-ತುಮಕೂರು, ಬೆಂಗಳೂರು-ಕಲಬುರಗಿ ಹಾಗೂ ಬೆಂಗಳೂರು-ಮಂಗಳೂರು ಸೇರಿದಂತೆ ಹಲವು ಪ್ರಮುಖ ರೈಲ್ವೆ ಮಾರ್ಗಗಳ ಕುರಿತು ರಾಜ್ಯ ಹಲವು ವರ್ಷಗಳಿಂದ ಒತ್ತಾಯಿಸುತ್ತಿದ್ದರೂ ಕೇಂದ್ರದಿಂದ ಅಗತ್ಯ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರು.

ಮಂಗಳೂರು ರೈಲ್ವೆ ವ್ಯಾಪ್ತಿಯ ವಿಚಾರದಲ್ಲೂ ಹಲವು ಸಮಸ್ಯೆಗಳಿವೆ. ಸುಮಾರು 330 ಕಿ.ಮೀ. ಉದ್ದದ ಕರಾವಳಿ ಪ್ರದೇಶ ಹೊಂದಿರುವ ಕರ್ನಾಟಕದಲ್ಲಿ ಸರಕು ಸಾಗಣೆ ಹಾಗೂ ಪ್ರಯಾಣಿಕರ ಸಂಚಾರ ಸುಗಮವಾಗಲು ರೈಲ್ವೆ ಸಂಪರ್ಕವನ್ನು ಮತ್ತಷ್ಟು ಬಲಪಡಿಸುವ ಅಗತ್ಯವಿದೆ ಎಂದು ಹೇಳಿದರು.

ಬೆಂಗಳೂರು-ಮಂಗಳೂರು ಜೋಡಿ ರೈಲು ಮಾರ್ಗ, ಹುಬ್ಬಳ್ಳಿ-ಅಂಕೋಲಾ ಜೋಡಿ ಮಾರ್ಗ, ಬೆಂಗಳೂರು-ವಿಜಯಪುರ ಹಾಗೂ ಬೆಂಗಳೂರು-ಚೆನ್ನೈ ಸಂಪರ್ಕ ಸೇರಿದಂತೆ ಹಲವು ಯೋಜನೆಗಳಿಗೆ ಆದ್ಯತೆ ನೀಡಬೇಕು. ಜೋಡಿ ಹಾಗೂ ಚತುಷ್ಪಥ ರೈಲು ಮಾರ್ಗಗಳಿಂದ ಪ್ರಯಾಣಿಕರ ಜತೆಗೆ ಕೈಗಾರಿಕೆಗಳು ಮತ್ತು ಸರಕು ಸಾಗಣೆಗೆ ಹೆಚ್ಚಿನ ಅನುಕೂಲವಾಗಲಿದೆ ಎಂದರು. ಬೆಂಗಳೂರು ದೇಶದ ಪ್ರಮುಖ ಮಾಹಿತಿ ತಂತ್ರಜ್ಞಾನ, ಸಂಶೋಧನೆ ಹಾಗೂ ನವೋದ್ಯಮ ಕೇಂದ್ರವಾಗಿ ಬೆಳೆಯುತ್ತಿದೆ. ಹೀಗಾಗಿ ರಾಜ್ಯದ ರೈಲ್ವೆ ಮೂಲಸೌಕರ್ಯವನ್ನು ಬಲಪಡಿಸುವುದು ಅತ್ಯಗತ್ಯ. ದಾವಣಗೆರೆ-ತುಮಕೂರು ರೈಲು ಮಾರ್ಗವನ್ನೂ ಜೋಡಿ ಮಾರ್ಗವಾಗಿ ಅಭಿವೃದ್ಧಿಪಡಿಸಿದರೆ ಹೆಚ್ಚಿನ ಪ್ರಯೋಜನವಾಗಲಿದೆ ಎಂದು ಹೇಳಿದರು.

ಕರ್ನಾಟಕಕ್ಕೂ ಹೈಸ್ಪೀಡ್ ರೈಲು ಯೋಜನೆ ಅಗತ್ಯವಿದೆ. ಮುಂಬೈ-ಪುಣೆ ಹಾಗೂ ಹೈದರಾಬಾದ್ ಕಡೆಗೆ ಹೈಸ್ಪೀಡ್ ರೈಲು ಯೋಜನೆಗಳ ಕುರಿತು ಚರ್ಚೆಯಾಗುತ್ತಿರುವ ಸಂದರ್ಭದಲ್ಲಿ ಮುಂಬೈ-ಬೆಂಗಳೂರು ಹೈಸ್ಪೀಡ್ ರೈಲು ಸಂಪರ್ಕಕ್ಕೂ ಆದ್ಯತೆ ನೀಡಬೇಕು. ಈ ಕುರಿತು ರಾಜ್ಯ ಸರ್ಕಾರ ಈಗಾಗಲೇ ಕೇಂದ್ರಕ್ಕೆ ಮನವಿ ಮಾಡಿದೆ ಎಂದರು. ಬೆಂಗಳೂರು-ಹುಬ್ಬಳ್ಳಿ-ಪುಣೆ ಮಾರ್ಗದಲ್ಲಿ ಸಂಚಾರ ದಟ್ಟಣೆ



ಹೆಚ್ಚಾಗಿದೆ. ರಾಷ್ಟ್ರೀಯ ಹೆದ್ದಾರಿಗಳ ಮೇಲೂ ಒತ್ತಡ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಚತುಷ್ಪಥ ರೈಲು ಮಾರ್ಗಗಳನ್ನು ನಿರ್ಮಿಸಿದರೆ ರಸ್ತೆ ಜಾಲದ ಮೇಲಿನ ಒತ್ತಡ ಕಡಿಮೆಯಾಗಲಿದೆ ಎಂದು ಅಭಿಪ್ರಾಯಪಟ್ಟರು. ರೈಲ್ವೆ ಯೋಜನೆಗಳ ಅನುಷ್ಠಾನದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು 50:50 ಅನುಪಾತದಲ್ಲಿ ಸಹಭಾಗಿತ್ವ ವಹಿಸುತ್ತಿವೆ. ಕರ್ನಾಟಕದ ರೈಲ್ವೆ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಇನ್ನಷ್ಟು ಸಹಕಾರ ನೀಡಬೇಕು ಎಂದು ಒತ್ತಾಯಿಸಿದರು.

ಈ ಕುರಿತು ರೈಲ್ವೆ ಖಾತೆಯ ರಾಜ್ಯ ಸಚಿವ ವಿ. ಸೋಮಣ್ಣ ಅವರೊಂದಿಗೆ ಚರ್ಚಿಸುವುದಾಗಿ ತಿಳಿಸಿದ ಪಾಟೀಲ್, ಮುಖ್ಯಮಂತ್ರಿ ಅವರಿಂದಲೂ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಸುವಂತೆ ಮನವಿ ಮಾಡುವುದಾಗಿ ಹೇಳಿದರು. 'ರಾಜ್ಯಕ್ಕೆ ಸೂಕ್ತ ನ್ಯಾಯ ಸಿಗಬೇಕು. ಈ ವಿಚಾರದಲ್ಲಿ ನಾವು ರಾಜಕೀಯ ಮಾಡುವುದಿಲ್ಲ' ಎಂದರು.

**ಕೆಪಿಎಸ್‌ಸಿ ವಿಚಾರದಲ್ಲೂ ಕುಮಾರಸ್ವಾಮಿಗೆ ತಿರುಗೇಟು**

ಉಪ ಮುಖ್ಯಮಂತ್ರಿ ಹುದ್ದೆ ಕುರಿತು ಕಾಂಗ್ರೆಸ್ ಹೈಕಮಾಂಡ್ ನಿರ್ಧಾರ ಕೈಗೊಂಡಿದೆ. ಹೆಚ್ಚು ಹುದ್ದೆಗಳಿದ್ದರೆ ಗೊಂದಲ ಉಂಟಾಗಬಹುದು ಎಂಬ ಕಾರಣಕ್ಕೆ ಒಂದೇ ಉಪ ಮುಖ್ಯಮಂತ್ರಿ ಹುದ್ದೆ ಉಳಿಸಿಕೊಂಡಿರಬಹುದು. ಪರಮೇಶ್ವರ್ ಹಿರಿಯ ನಾಯಕರಾಗಿದ್ದು, ಅವರಿಗೆ ಅವಕಾಶ ಸಿಕ್ಕಿರುವುದು ವೈಯಕ್ತಿಕವಾಗಿ ಸಂತೋಷ ತಂದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಹಿಂದೆ ತಮ್ಮೊಂದಿಗೆ ಚರ್ಚಿಸುವಾಗ ಒಂದೇ ಉಪ ಮುಖ್ಯಮಂತ್ರಿ ಹುದ್ದೆಯ ಬಗ್ಗೆ ಸೂಚನೆ ನೀಡಿದ್ದರು ಎಂದು ಪಾಟೀಲ್ ಹೇಳಿದರು. ತಾವು ಅಧಿಕಾರಕ್ಕೆ ಬಂದರೆ ಕೆಪಿಎಸ್‌ಸಿಯನ್ನು ಸ್ವಚ್ಛಗೊಳಿಸುವುದಾಗಿ ಎಚ್.ಡಿ. ಕುಮಾರಸ್ವಾಮಿ ಹೇಳುತ್ತಿರುವ ಕುರಿತು ಪ್ರತಿಕ್ರಿಯಿಸಿದ ಅವರು, 'ಈ ಹಿಂದೆ ಎರಡು ಬಾರಿ ಮುಖ್ಯಮಂತ್ರಿಯಾಗಿದ್ದಾಗ ಕೆಪಿಎಸ್‌ಸಿಯನ್ನು ಏಕೆ ಸ್ವಚ್ಛಗೊಳಿಸಲಿಲ್ಲ?' ಎಂದು ಪ್ರಶ್ನಿಸಿದರು. ಕೆಪಿಎಸ್‌ಸಿಗೆ ಅಧ್ಯಕ್ಷರನ್ನು ನೇಮಿಸಿದ್ದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ. ನೈಸ್ ಯೋಜನೆ ಹಾಗೂ ಬಿಡದಿ ಉಪನಗರ ಯೋಜನೆಗಳ ಸೃಷ್ಟಿಕರ್ತರು ಕುಮಾರಸ್ವಾಮಿ ಹಾಗೂ ಅವರ ಪಕ್ಷವೇ. ಅವರೇ ನಿರ್ಧಾರಗಳನ್ನು ಕೈಗೊಂಡು ಇದೀಗ ಬೇರೆಯವರ ಮೇಲೆ ಹೊಣೆ ಹೊರಿಸುತ್ತಿದ್ದಾರೆ ಎಂದು ಪಾಟೀಲ್ ಟೀಕಿಸಿದರು.

## ತಮಿಳುನಾಡಿನಲ್ಲಿ ಸೆ.1ರಿಂದ ಡಿಜಿಟಲ್‌ಮಯವಾಗಲಿವೆ ಟಿಎಎಸ್‌ಎಂಎಸಿ ಮದ್ಯದಂಗಡಿಗಳು

ಚೆನ್ನೈ: ತಮಿಳುನಾಡು ಸರ್ಕಾರದ ಸ್ವಾಮ್ಯದ ಮದ್ಯ ಮಾರಾಟ ನಿಗಮವಾದ ಟಿಎಎಸ್‌ಎಂಎಸಿ (ಟಾಸ್ಮ್ಯಾಕ್), ರಾಜ್ಯದ ಮದ್ಯದಂಗಡಿಗಳಲ್ಲಿ ಪಾರದರ್ಶಕತೆ ಹಾಗೂ ಕಾರ್ಯಾಚರಣೆಯ ವೇಗ ಹೆಚ್ಚಿಸುವ ನಿಟ್ಟಿನಲ್ಲಿ ಮಹತ್ವದ ಬದಲಾವಣೆಗೆ ಮುಂದಾಗಿದೆ. ಸೆಪ್ಟೆಂಬರ್ 1ರಿಂದ ರಾಜ್ಯದ ಎಲ್ಲ ಚಿಲ್ಲರೆ ಮದ್ಯದಂಗಡಿಗಳನ್ನು ಹಸ್ತಚಾಲಿತ ವ್ಯವಸ್ಥೆಯಿಂದ ಸಂಪೂರ್ಣ ಸ್ವಯಂಚಾಲಿತ ಡಿಜಿಟಲ್ ವ್ಯವಸ್ಥೆಗೆ ಪರಿವರ್ತಿಸಲಾಗುತ್ತಿದೆ.

ಇನ್ನು ಮುಂದೆ ಮದ್ಯದಂಗಡಿಗಳಲ್ಲಿ ಕಾಗದದ ಇಂಡೆಂಟ್ ಸಲ್ಲಿಸುವ ವ್ಯವಸ್ಥೆ ಇರುವುದಿಲ್ಲ. ಬದಲಿಗೆ, ವಿಶೇಷ ಹ್ಯಾಂಡ್‌ಹೆಲ್ಡ್ ಸಾಧನಗಳ ಮೂಲಕ ಅಗತ್ಯವಿರುವ ಮದ್ಯದ




ದಾಸ್ತಾನು ಕುರಿತು ಸ್ವಯಂಚಾಲಿತವಾಗಿ ಬೇಡಿಕೆ ಸಲ್ಲಿಸಲಾಗುತ್ತದೆ. ಪ್ರದೇಶವಾರು ಮಾರಾಟದ ಮಾದರಿಯನ್ನು ಆಧರಿಸಿ ವಿವಿಧ ಬ್ರ್ಯಾಂಡ್‌ಗಳನ್ನು ಪೂರೈಸಲಾಗುತ್ತದೆ. ಸ್ಥಳೀಯ ಬೇಡಿಕೆಗೆ ಅನುಗುಣವಾಗಿ ಸ್ಟಾಕ್ ಆರ್ಡರ್‌ಗಳನ್ನು ಶೇ.20ರಷ್ಟು ಹೆಚ್ಚಿಸಲು ಅಥವಾ ನೋಂದಾಯಿತ ಹೊಸ ಬ್ರ್ಯಾಂಡ್‌ಗಳನ್ನು ಸೇರಿಸಲು ಅಂಗಡಿ ಮೇಲ್ವಿಚಾರಕರಿಗೆ ಅವಕಾಶ ನೀಡಲಾಗಿದೆ.

ಭೌತಿಕ ದಾಖಲೆ ಸಲ್ಲಿಕೆ ವ್ಯವಸ್ಥೆಯನ್ನು ಸಂಪೂರ್ಣವಾಗಿ ಕೈಬಿಡಲಾಗಿದ್ದು, ಅಂತಿಮ ಇಂಡೆಂಟ್ ಸಲ್ಲಿಕೆಗೆ ಅಂಗಡಿ ಮೇಲ್ವಿಚಾರಕರ ನೋಂದಾಯಿತ ಮೊಬೈಲ್ ಸಂಖ್ಯೆಗೆ ಕಳುಹಿಸಲಾಗುವ ಒನ್-ಟೈಮ್ ಪಾಸ್‌ವರ್ಡ್ (ಒಟಿಪಿ) ಮೂಲಕ ದೃಢೀಕರಣ ಕಡ್ಡಾಯವಾಗಿದೆ. ವ್ಯವಸ್ಥೆಯಲ್ಲಿ ದೃಢೀಕರಿಸಲಾದ ಪ್ರಮಾಣಗಳನ್ನೇ ಅಂತಿಮವೆಂದು ಪರಿಗಣಿಸಿ, ಸಂಬಂಧಪಟ್ಟ ಸ್ಥಳೀಯ ಡಿಪೋಗಳಿಗೆ ನೇರವಾಗಿ ಸ್ಟಾಕ್ ರವಾನೆಗಾಗಿ ಕಳುಹಿಸಲಾಗುತ್ತದೆ. ಇದರಿಂದ ಮದ್ಯದ ಪೂರೈಕೆಯಲ್ಲಿನ ವಿಳಂಬ ಹಾಗೂ ಅಡಚಣೆಗಳನ್ನು ಕಡಿಮೆ ಮಾಡಲು ಸಾಧ್ಯವಾಗಲಿದೆ.

2025ರ ಮಧ್ಯಭಾಗದಲ್ಲೇ ತಮಿಳುನಾಡಿನ ಎಲ್ಲ 38 ಜಿಲ್ಲೆಗಳು ಹಾಗೂ ಡಿಪೋಗಳಲ್ಲಿ ಆರಂಭದಿಂದ ಅಂತ್ಯದವರೆಗೆ ಗಣಕೀಕರಣ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗಿತ್ತು. ಇದರ ಮುಂದುವರಿದ ಭಾಗವಾಗಿ ಇದೀಗ ಡಿಜಿಟಲ್ ಇಂಡೆಂಟಿಂಗ್ ವ್ಯವಸ್ಥೆ ಜಾರಿಗೆ ಬರುತ್ತಿದ್ದು, ಮದ್ಯದಂಗಡಿಗಳ ಕಾರ್ಯಾಚರಣೆಯನ್ನು ಹೆಚ್ಚು ಪಾರದರ್ಶಕ ಹಾಗೂ ವ್ಯವಸ್ಥಿತಗೊಳಿಸುವ ನಿರೀಕ್ಷೆಯಿದೆ.

Publisher and Owned by CHANDRAKANTA From Near Durgamma Temple Dyampur, Koppal District- 583232 Printed at VINAYA Printers, VINAYA Publication Word No.01 Ballary Pootwer, Bhagynagar, Koppal- 583238, Editor : CHANDRAKANTA enammadhruthinews@gmail.com